Generated by Foxit PDF Creator © Foxit Software
http://www.foxitsoftware.com For evaluation only.



**ಶ್ರೀ ಪ್ಲವ ಸಂವತ್ಸರದ ಆಶ್ವಯುಜ – ಕಾರ್ತೀಕ – ಮಾರ್ಗಶಿರ**

★ ಅಕ್ಟೋಬರ್– ನವೆಂಬರ್– ಡಿಸೆಂಬರ್ : 2021 ★ ಸಂಚಿಕೆ –88

**ಬ್ರಾಹ್ಮಣ ಸಂಘ , ತೀರ್ಥಹಳ್ಳಿ ತಾಲ್ಲೂಕು ( ರಿ ) ,ಗಾಯತ್ರಿಮಂದಿರ , ತೀರ್ಥಹಳ್ಳಿ ,✆ : 08181 – 228664**

| :: ಅಧ್ಯಕ್ಷರು :: | :: ಪ್ರಧಾನ ಕಾರ್ಯದರ್ಶಿ :: | :: ಕೋಶಾಧಿಕಾರಿ :: |
|---|---|---|
| ಶ್ರೀ ಟಿ.ಎ. ಚಂದ್ರಶೇಖರ್, ತುಂಬರಮನೆ | ಶ್ರೀ ಕೆ. ಎನ್. ಉರಾಳ್, ತೀರ್ಥಹಳ್ಳಿ | ಡಾ|| ಎನ್. ಎಸ್. ಮನೋಹರರಾವ್, ತೀರ್ಥಹಳ್ಳಿ |
| ☎: 9448255567 | ☎: 9886548445 | ☎: 9448218750 |

:: ಪ್ರಧಾನ ಸಂಪಾದಕರು ::
**ಶ್ರೀ ವಿ.ಆರ್.ಹೆಗಡೆ**
☎: 9481504222

:: ಸಂಪಾದಕ ಮಂಡಳಿ ::
**ಶ್ರೀ ವಿ. ಗಣೇಶ್ ಉಡುಪ**
☎: 9449170939
**ಶ್ರೀ ಹೆಚ್.ಎಂ. ಕೃಷ್ಣಮೂರ್ತಿ**
☎: 9449584760
**ಶ್ರೀ ಮತಿ ವಿನುತಾ ಮುರಳೀಧರ್**
☎:9481688087
**ಶ್ರೀ ಶಿವರಾಮ್**
☎: 9449810731

:: ಪ್ರಸರಣಾ ಸಮಿತಿ ::
**ಅಧ್ಯಕ್ಷರು : ಶ್ರೀ ಟಿ. ಎ. ಚಂದ್ರಶೇಖರ್**
**ಸಂಚಾಲಕರು : ಶ್ರೀ ವಿ.ಆರ್.ಹೆಗಡೆ**
**ಕಾರ್ಯದರ್ಶಿ: ಶ್ರೀ ನರಸಿಂಹ ಭಟ್ಟ**
**ನಿರ್ದೇಶಕರು :**
**ಶ್ರೀ ಕೆ. ಎನ್. ಉರಾಳ್**
**ಶ್ರೀ ವಿ. ಸತೀಶ್**
**ಶ್ರೀ ಕೆ. ಎಸ್. ಹರೀಶ್**
**ಶ್ರೀ ರಾಘವೇಂದ್ರ ಆಚಾರ್ಯ**
**ಶ್ರೀ ಕೆ. ಎ. ರಮೇಶ ಅಡಿಗ**

:: ಪ್ರಕಾಶಕರು ::
ಬ್ರಾಹ್ಮಣ ಸಂಘ ತೀರ್ಥಹಳ್ಳಿ ತಾ|| (ರಿ)
ಗಾಯತ್ರಿಮಂದಿರ ,ತೀರ್ಥಹಳ್ಳಿ-577432
☎: 08181 – 228664
email : viprabharathi@gmail.com

## ★ ಅನುಕ್ರಮಣಿಕೆ ★

| ವಿಷಯ | ಲೇಖಕರು | ಪುಟ |
|---|---|---|
| ಶ್ರೀ ಲಲಿತಾಸ್ತುತಿ | ಶ್ರೀಮತಿ ಗಾಯತ್ರೀದೇವಿ ಮಹಿಷಿ | 2 |
| ಸಂಪಾದಕರ ಮಾತು | ಶ್ರೀ ವಿ. ಆರ್. ಹೆಗಡೆ | 3 |
| ಗಾಯತ್ರೀ ಹೋಮ, ಗಣಹೋಮ, ಮೃತ್ಯುಂಜಯ ಹೋಮ ಮತ್ತು ಸಾಧಕರಿಗೆ ಚುನಾಯಿತ ಪ್ರತಿನಿಧಿಗಳಿಗೆ ಸನ್ಮಾನ 2020 – 21ನೇ ಸಾಲಿನ ಸರ್ವ ಸದಸ್ಯರ ಸಭೆ | | 4 |
| ಪವಿತ್ರ ಹಸು | ಸಂಗ್ರಹ : ಶ್ರೀ ನರಹರಿ ಭಟ್ಟ | 17 |
| ವೇದೋಪನಿಷತ್ತುಗಳಿಗೊಂದು ಪ್ರಸ್ತಾವನೆ | ವಿದ್ವಾನ್ ಯು. ಪದ್ಮನಾಭ ಭಟ್ಟ, ದಬ್ಬೆಕಟ್ಟೆ | 18 |
| ಭಗವದ್ಗೀತಾ ಅಭಿಯಾನ, | | 21 |
| ದೈವ ಪ್ರೀತಿ – ಪಾಪಭೀತಿ – ಸಂಘನೀತಿ | ಶ್ರೀ ಎಂ. ಎಸ್. ರಮೇಶ್ | 22 |
| ಜಂಕ್ ಫುಡ್ | | 24 |
| ಶ್ರೀ ಶಾಂಕರ ತತ್ವದರ್ಶನ ತೈತ್ತರೀಯೋಪನಿಷತ್ತು | ಶ್ರೀಮತಿ ಸ್ವಪ್ನಾ ಶಶಿಧರ ಭಟ್ | 26 |
| ಸೂಕ್ತಿ ಸುಧಾ ಪಂಚಕಮ್ | ಶ್ರೀ ಕೇಶವಮೂರ್ತಿ, ಕಲ್ಮನೆ | 27 |
| ಸುಭಾಷಿತ ಸಂಗ್ರಹ | ಶ್ರೀ ಎ. ವಿ. ಮೃತ್ಯುಂಜಯ ಸ್ವಾಮಿ | 28 |

**ಮುಖಪುಟ : ಗಾಯತ್ರೀ ಮಂದಿರ , ತೀರ್ಥಹಳ್ಳಿ**

Generated by Foxit PDF Creator © Foxit Software
http://www.foxitsoftware.com For evaluation only.



# " ಶ್ರೀ ಲಲಿತಾ ಸ್ತುತಿ "

**ಮುಂದುವರೆದುದು ...**

**ಶ್ರೀಮತಿ ಗಾಯತ್ರೀ ದೇವಿ , ಮಹಿಷಿ**

ಕಳೆದ ಸಮಯವು ಮತ್ತೆ ಬಳಿಗೆ ಬಾರದು ಇಂತೆ
ಬಳಿಯ ಸಮಯದ ಬೆಲೆಯು ಅರಿವಾಗದಿಹುದು ॥
ಬಳಸಿ ಬಾಳನು ಬರಿದೆ ಹುಸಿ ಕಲ್ಪನೆಗಳೊಳಗೆ
ಕಳೆಯ ಬಹುದೇಹೇಳು –ಲಲಿತಾಂಬಿಕೆ ॥ ೧೩೦೯ ॥

ಜೊತೆಯಿರುವೆ ನೀನೆಂದೆ ಹಿತವಾಯ್ತು ಈ ಯಾನ
ಮತಿಯೊಳುದ್ಭವವಾಯ್ತು ನೂತನದ ಶಕ್ತಿ ॥
ಪೃಥುವಿಯೊಳು ಭಕ್ತಿ ಭಗವಂತರೊಡನಾಟವೇ
ಶೃತಿ, ಸ್ಮೃತಿಯು, ಗೀತೆಗಳು –ಲಲಿತಾಂಬಿಕೆ ॥೧೩೧೦ ॥

ಸತ್ಯ ಸಂಕಲ್ಪವದೆ; ನಿಶ್ಚಯವು ಬಾಳಿನಲಿ
ಎತ್ತಿ ನಡೆಸುವುದದುವೆ ಧೀತ ಗುರಿಯತ್ತ ॥
ಚಿತ್ರಚೋದಕವಾಗಿ ನಿಂತಿಹುದು ಹರಸಿ ಭಗ
ವತ್ಕೃತಿಯನವರತ –ಲಲಿತಾಂಬಿಕೆ ॥ ೧೩೧೧ ॥

ಚಿಂತನವು ಚಿಂತೆಯಪ್ಪುದು ಬರುವ ಭಾವಗಳು
ಸಂತೆ ತೀರಿದ ಸರಕಿನಂತೆ ಅಡಗುವವು ॥
ಅಂತರಂಗವ ಮುಚ್ಚಿ ಕುಳಿತಾಗ ನಿನ್ನೊಲುಮೆ
ಸಂತತವು ಇರದಿರಲು –ಲಲಿತಾಂಬಿಕೆ ॥ ೧೩೧೨ ॥

ಸಮಯವಿಹುದೆಂದಲ್ಲ ತಮ ತಮಗೆ ಬರುವ ವ–
ರ್ಣಮಯದನುಕೂಲ ಸಿದ್ಧಿಯೆಂದಲ್ಲ ॥
ನಿಯಮಿತದ ಸೇವೆಯಿದು ವಿಶ್ವಂಭರೆಯೊಳೆಂದು
ಕವಿ ಬರೆವುದನು ಭಾವ –ಲಲಿತಾಂಬಿಕೆ ॥ ೧೩೧೩ ॥

ಅವಕಾಶವೆಂಬುವುದು ಸುಳಿಸುಳಿದು ಬಹುದಲ್ಲ
ದಿವಸವಂವ್ಯರ್ಥಗೈಯ್ಯುದೆ ಕೂಡಿಸಿಡಲು ॥
ತನಗೆ ತಾ ರೂಪುಗೊಳ್ಳುತ ಹುಟ್ಟು ಪಡೆವೊಂದು
ದಿವಿ ದಿವ್ಯ ಕಲ್ಪಕವು –ಲಲಿತಾಂಬಿಕೆ ॥ ೧೩೧೪ ॥

ರಸದೊಳರಿವೆನು ಮತ್ತೆ, ವಿಷಯ ವಾಸನೆಯಳಿದು
ಪಸರಿಸುವ ಸದ್ಭಾವದಿಂದರಿವೆ ದೇವಿ ॥
ಹೊಸತು ಅರಳುವ ಪ್ರತೀ ಕುಸುಮದೋಳ್ ನಿನ್ನಿರವ
ಬೆಸಗೈವೆ ಬರಹದೊಳು –ಲಲಿತಾಂಬಿಕೆ ॥ ೧೩೧೫ ॥

ಲೋಪವಾಗದ ಹಾಗೆ ನಿತ್ಯ ನೈಮಿತ್ತಿಕವು
ವ್ಯಾಪಿಸಿರೆ ಸತ್ಕರ್ಮದಾಚರಣೆ ಮನದಿ ॥
ನೀ ಪ್ರೀತಳಾಗಿದಯೆಗೈವೆ ಮಾನಸದರಿವ
ಲೋಕೋತ್ತರದ ಯಶವ –ಲಲಿತಾಂಬಿಕೆ॥೧೩೧೬॥

ಕಾಲ ನಮ್ಮಳವಿನದೆ ಲೆಕ್ಕಗೊಳ್ಳುತ ಬರೆಯೆ
ಮೇಳವಿಹುದೇನಿಲ್ಲಿ ಜೋಡಿಸಿದವರ್ಣ ॥
ಆಲಸ್ಯಕೆಡೆಯಿರದೆ ನಿರ್ವಂಚನೆಯೊಳಿರಲು
ದೇವಿ ನಡೆಸುವೆಯೆಲ್ಲ –ಲಲಿತಾಂಬಿಕೆ ॥ ೧೩೧೭ ॥

ವಿಶ್ವಾಸವತಿ ಮೌಲ್ಯ ನೀನಿತ್ತ ಹಿರಿ ಕೊಡುಗೆ
ಕೊಟ್ಟು ತೀರಿಸದಂಥ ಋಣಬಂಧವಿಲ್ಲಿ ॥
ಹುಟ್ಟಿ ಬಂದೀ ಬುವಿಯು ಕಷ್ಟವೆನದಿರೆ ಸಾಕು
ಮೆಚ್ಚಿಕೊಂಬೆಯೆ ನೀನು –ಲಲಿತಾಂಬಿಕೆ ॥ ೧೩೧೮ ॥

ಅರ್ಥವಿರುವುದು ನಿನ್ನ ಸತ್ಪಾದ ಪದ್ಮದಲಿ
ಚಿತ್ತವನು ನೆಲೆಗೊಳಿಸೆ ಜ್ಞಾನವೀಧಿಯಲಿ ॥
ಎತ್ತ ಸಾಧ್ಯವು ದೇವಿ ಮನವತ್ತ ಸೆಳೆದೆ ನೀ
ಸತ್ಸಾಧನೆಯನಿತ್ತು –ಲಲಿತಾಂಬಿಕೆ ॥ ೧೩೧೯ ॥

ಎಚ್ಚರವನೀವೆ ನೀ ಹಗಲಿರುಳ ರೂಪದಲಿ
ಸುತ್ತಿ ಸವೆಯುತಲಿಹುದು ಆಯುಷದ ಚಕ್ರ ॥
ಭಕ್ತಿಯಿಂ ಪಾದ ದರ್ಶನ ಪಾವನದ ಭಾಗ್ಯ
ರಪ್ಪಂತೆ ಪೊರೆ ದೇವಿ –ಲಲಿತಾಂಬಿಕೆ ॥ ೧೩೨೦॥

**– ಮುಂದುವರೆಯುವುದು**

Generated by Foxit PDF Creator © Foxit Software
http://www.foxitsoftware.com For evaluation only.



## ಸಂಪಾದಕರ ಮಾತು –

**ಶ್ರೀ ವಿ. ಆರ್. ಹೆಗಡೆ**

ಆತ್ಮೀಯ ವಿಪ್ರಬಾಂಧವರೇ,

'ವಿಪ್ರಭಾರತೀಯ' ಈ 88ನೆ ಸಂಚಿಕೆಯ ಮೂಲಕ ನಾವು ನಿರಂತರ ಪ್ರಕಟಣೆಯ 22 ವರ್ಷಗಳನ್ನು ಮುಗಿಸುತ್ತಿದ್ದೇವೆ ಎಂಬುದು ನಮಗೆ ಬಹು ಹೆಮ್ಮೆಯ ಸಂಗತಿ. ನಮ್ಮ ರಾಜ್ಯದ ತಾಲೂಕು ಮಟ್ಟದ ಸಂಸ್ಥೆಯೊಂದು ಇಂತಹ ಸಾಧನೆ ಮಾಡಿರುವುದು ಬಲು ಅಪರೂಪ ಎನ್ನುವುದೂ ಅಷ್ಟೇ ಪ್ರಮುಖ ಸಂಗತಿ.

ನಮ್ಮ ಈ ಪಯಣದಲ್ಲಿ ತಾಲೂಕಿನ ವಿಪ್ರಬಾಂಧವರು, ಲೇಖಕರು, ಜಾಹೀರಾತುದಾರರು ನೀಡಿದ ಸಹಕಾರ ಅವಿಸ್ಮರಣೀಯ. 'ವಿಪ್ರಭಾರತೀ' ತಾಲೂಕಿನ ಎಲ್ಲ ಕುಟುಂಬಗಳಿಗೂ ತಲುಪಬೇಕು ಎಂಬುದು ನಮ್ಮ ಕನಸು. ಆ ಕನಸು ನನಸಾಗಲು ನಿಮ್ಮೆಲ್ಲರ ಸಹಕಾರ ಅತ್ಯಂತ ಅವಶ್ಯಕ. ನಿಮ್ಮ ನೆರೆಹೊರೆಯವರು, ಸ್ನೇಹಿತರನ್ನು ಚಂದಾದಾರರಾಗುವಂತೆ ನೀವು ಪ್ರೇರೇಪಿಸಿದರೆ ಮಾತ್ರ ಅದು ಸಾಧ್ಯ, ತಾಲೂಕಿನ ಎಲ್ಲ 48 ಸಂಘಟನಾ ಸಮಿತಿಗಳೂ ಈ ವಿಷಯದಲ್ಲಿ ಕ್ರಿಯಾಶೀಲರಾದರೆ ನಮ್ಮ ಕನಸು ನನಸಾಗುತ್ತದೆ. ನಮ್ಮ ಮನ–ಮನೆ ಒಂದು ದೇವಾಲಯವಾಗಬೇಕು. ದೇವಾಲಯ ದೇವರನ್ನು ಪೂಜಿಸುವ ಒಂದು ಸ್ಥಳ. ಅದು ಶುದ್ಧ, ಸ್ವಚ್ಛ, ದೇವಾಲಯವಾಗಬೇಕೆಂದಾದರೆ ನಮ್ಮ ಬದುಕು ನಮ್ಮ ಚಿಂತನೆ ಶುದ್ಧ ಸಾತ್ವಿಕ, ಉದಾರವಾಗಿರಬೇಕಲ್ಲವೇ, ಇಂದಿನ ಉನ್ನತ ಶಿಕ್ಷಣ, ನಗರ ಜೀವನದ ಒತ್ತಡ ಹಿರಿಯರಿಲ್ಲದ ಮನೆ ನಮ್ಮ ಜೀವನದ ಮಾರ್ಗ ಉದ್ದೇಶಗಳನ್ನೇ ಬದಲಿಸುತ್ತಿವೆ. ನಾವು ವಿಪ್ರ ಸಂಸ್ಕೃತಿ–ಸಂಸ್ಕಾರಗಳಿಂದ ದೂರವಾಗುತ್ತಿದ್ದೇವೆ. ನಗರ ಜೀವನದ ಅನಿವಾರ್ಯತೆ, ವಿದೇಶಿ ಜೀವನ ಶೈಲಿ ನಮ್ಮ ಸಂಸ್ಕೃತಿ – ಸಂಸ್ಕಾರಗಳನ್ನು ನಾಶಪಡಿಸುತ್ತಿವೆ. ಹಿರಿಯರೊಡನೆ ಸಹಬಾಳ್ವೆಯಿಲ್ಲದಿರುವುದು ಬಹು ವಿಷಾದದ ಸಂಗತಿ.

ಎರಡು ಕೈ ಸೇರಿದರೆ ಮಾತ್ರ ಚಪ್ಪಾಳೆ ಸಾಧ್ಯ. ಹಿರಿಯರಾದ ನಾವು ಕಿರಿಯರಾದ ನಮ್ಮ ಮಕ್ಕಳು–ಮೊಮ್ಮಕ್ಕಳ ಜೊತೆ ಹೊಂದಾಣಿಕೆ ಮಾಡಿಕೊಂಡು ಬದುಕುತ್ತ ನಮ್ಮ ಸಂಸ್ಕೃತಿ – ಸಂಸ್ಕಾರಗಳ ಮುಂದುವರಿಕೆಗೆ ಸಂಕಲ್ಪ ಮಾಡಬೇಕು. ಕಿರಿಯರೂ ಕೂಡ ಈ ಸತ್ಕಾರ್ಯದಲ್ಲಿ ತಮ್ಮ ಹೊಣೆಗಾರಿಕೆಯನ್ನು ಅರಿತು ನಮ್ಮ ಸಂಸ್ಕೃತಿ–ಸಂಸ್ಕಾರಗಳ ಮುಂದುವರಿಕೆಯ ಪಾಲುದಾರರಾಗಬೇಕು. ಪಿತ್ರಾರ್ಜಿತ ಆಸ್ತಿಯೆಂಬುದು ಕೇವಲ ಮನೆ–ಜಮೀನು, ದುಡ್ಡು–ಕಾಸು ಮಾತ್ರವಲ್ಲ. ಅವುಗಳಿಗಿಂತಲೂ ಮಿಗಿಲಾದದ್ದು ಸಂಸ್ಕೃತಿ–ಸಂಸ್ಕಾರ, ಹಿರಿಯರು ಅನುಸರಿಸಿಕೊಂಡು ಬರುತ್ತಿರುವ ಸಂಪ್ರದಾಯಗಳು, ಸಹಕಾರ, ಸಹಬಾಳ್ವೆಯ ತತ್ವ ಎಂಬುದನ್ನು ಅರಿತು ಅನುಸರಿಸಬೇಕು.

**"ಯತ್ರ ನಾರ್‍ಯಸ್ತು ಪೂಜ್ಯಂತೇ, ರಮಂತೇ ತತ್ರ ದೇವತಾಃ"** ಯಾವ ಮನೆಯಲ್ಲಿ ಮಹಿಳೆಯರಿಗೆ ವಿಶೇಷ ಪ್ರೀತ್ಯಾದರ ಗೌರವ ದೊರೆಯುತ್ತದೋ ಆ ಮನೆಯಲ್ಲಿ ಸುಖ–ಶಾಂತಿ ಸದಾ ದೊರೆಯುತ್ತದೆ. ಯಾರಾದರೋ ಮಗಳೊಬ್ಬಳು ನಮ್ಮ ಮನೆಗೆ ಸೊಸೆಯಾಗಿ ಹೊಸ ಚಿಗುರನ್ನು ಮೂಡಿಸುವ, ಹಳೆ ಬೇರುಗಳನ್ನು ರಕ್ಷಿಸುವ ಕುಟುಂಬದ ಸಂಸ್ಕಾರ–ಸಂಪ್ರದಾಯಗಳನ್ನು ಮುಂದುವರೆಸಿಕೊಂಡು ಹೋಗುವುದು ಒಂದು ಮಹತ್ಕಾರ್ಯವೇ ಸರಿ. ಅವಳ ಅತ್ತೆ ಮುಂದೆ ಬರಲಿರುವ ಸೊಸೆ, ಇನ್ಯಾರದೋ ಮನೆಯ ಸೊಸೆಯಾಗುವ ತನ್ನ ಮಗಳ ಬಾಳಿನಲ್ಲಿ ಮಹಿಳೆಯೊಬ್ಬಳ ಪಾತ್ರ ಅತ್ಯಂತ ಪ್ರಮುಖವಾದುದು. ಕುಟುಂಬಕ್ಕಾಗಿ ಅವಳ ದುಡಿಮೆ, ಸ್ವಾರ್ಥತ್ಯಾಗ ಅತ್ಯಂತ ಶ್ರೇಷ್ಠಕಾರ್ಯ. ಕುಟುಂಬವೊಂದರಲ್ಲಿರುವ ಅಜ್ಜ–ಅಜ್ಜಿ, ತಂದೆ–ತಾಯಿ ಮಕ್ಕಳು ಎಲ್ಲರೂ ನಮ್ಮ ಸಮಾಜದ ಇಂತಹ ಶ್ರೇಷ್ಠ ತತ್ವಗಳನ್ನು ಅರಿತು–ಅನುಸರಿಸಿದರೆ ಪ್ರತಿ ಮನವೂ, ಮನೆಯೂ ಒಂದು ದೇವಾಲಯ. ಅಂತಹ ಒಂದು ಕಾಲ ಬೇಗ ಬರಲಿ ಎಂದು ಹಾರೈಸೋಣ, ಅದನ್ನು ಸಾಧಿಸುವತ್ತ ಹೆಜ್ಜೆಗಳನ್ನಿರಿಸೋಣ – **"ಶ್ರೀಯಾಗಲಿ ನಿಮಗೆ"**

# ಗಾಯತ್ರೀ ಹೋಮ, ಗಣಹೋಮ, ಮೃತ್ಯುಂಜಯ ಹೋಮ ಮತ್ತು ಸಾಧಕರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಸನ್ಮಾನ ಮತ್ತು 2020–21ನೇ ಸಾಲಿನ ಸರ್ವ ಸದಸ್ಯರ ಸಭೆ

ಬ್ರಾಹ್ಮಣ ಸಂಘ, ತೀರ್ಥಹಳ್ಳಿ ಇವರ ನೇತೃತ್ವದಲ್ಲಿ ದಿನಾಂಕ 24–11–2021ರ ಬುಧವಾರದಂದು ಗಾಯತ್ರೀ ಮಂದಿರದಲ್ಲಿ ಗಾಯತ್ರೀ ಹೋಮ, ಗಣಹೋಮ, ಮೃತ್ಯುಂಜಯ ಹೋಮ ನೆರವೇರಿತು. ಈ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಧಾರ್ಮಿಕ ಸಮಿತಿಯ ಸಂಚಾಲಕರು ಹಾಗು ಸಂಘದ ಉಪಾಧ್ಯಕ್ಷರಾದ ಶ್ರೀಯುತ ಶಿವರಾಮ ಉಡುಪರ ನೇತೃತ್ವದಲ್ಲಿ ಸಾಂಗವಾಗಿ ನಡೆಯಿತು. ತಾಲ್ಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಋತ್ವಿಜರು ಹೋಮ ಹವನಾದಿಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಅಭಿನಂದನೆ ಸಲ್ಲಿಸಲಾಯಿತು. ಶ್ರೀಯುತ ಗಣೇಶ ಉಡುಪರು, ಕುಮಾರನಹಳ್ಳಿ ಇವರ ವೇದಘೋಷದೊಂದಿಗೆ ಸಭಾ ಕಾರ್ಯಕ್ರಮ ಆರಂಭವಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀಯುತ ಶಿವರಾಮ ಉಡುಪರು ಸರ್ವರನ್ನೂ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿವಿಧ ಕ್ಷೇತ್ರಗಳಲ್ಲಿ ಗುರುತರ ಸೇವೆ ಸಲ್ಲಿಸಿದ ಎಂಟು ಜನ ಹಿರಿಯರನ್ನು ಸನ್ಮಾನಿಸಲಾಯಿತು.

ನಂತರದಲ್ಲಿ ನಮ್ಮ ತಾಲ್ಲೂಕಿನಿಂದ ಆಯ್ಕೆಗೊಂಡ ಚುನಾಯಿತ ಪ್ರತಿನಿಧಿಗಳನ್ನು ಗೌರವಿಸಲಾಯಿತು.

ಸನ್ಮಾನಿತರ ಪರವಾಗಿ ಅನಂತ ಭಟ್ಟರು ಹೊದಲ, ರವಿರಾಜ ವೈದ್ಯರು ಬಾಳೇಬೈಲು, ಪ್ರಸನ್ನಕುಮಾರ ತೀರ್ಥಹಳ್ಳಿ ಮತ್ತು ಜ್ಯೋತಿ ಮೋಹನ್ ತೀರ್ಥಹಳ್ಳಿ ಇವರುಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಇದೇ ವೇದಿಕೆಯಲ್ಲಿ ಇಂದಿನ ಡಿಜಿಟಲ್ ಯುಗದ ಮೂಲಭೂತ ಅವಶ್ಯಕತೆಗಳಲ್ಲಿ ಅತಿ ಅಗತ್ಯ ಹಾಗು C¤ªÁgÀªÁzÀ **ಜಾಲತಾಣದ(ವೆಬ್‌ಸೈಟ್)** ಉದ್ಘಾಟನೆಯಾಯಿತು. ಕೋಶಾಧಿಕಾರಿಗಳಾದ ಡಾ.ಎನ್.ಎಸ್. ಮನೋಹರ ರಾವ್ ಜಾಲತಾಣದ ಬಗ್ಗೆ ಮಾಹಿತಿ ನೀಡಿದರು. ವೆಬ್‌ಸೈಟ್‌ನ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ.ಬಿ.ಎಸ್. ರಾಘವೇಂದ್ರ ಭಟ್ ನೆರವೇರಿಸಿ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ದೊರೆಯುವ ಸೌಲಭ್ಯಗಳು ಹಾಗು ಮಂಡಳಿಯ ಮುಂದಿನ ಕಾರ್ಯ ಯೋಜನೆಗಳ ಕುರಿತು ಸಭೆಗೆ ಮಾಹಿತಿ ನೀಡಿದರು. ಧಾರ್ಮಿಕ ಮತ್ತು ಸಭಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ ಎಲ್ಲರಿಗೂ ಸಭೆಯ ಅಧ್ಯಕ್ಷತೆ ವಹಿಸಿದ್ದ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ತುಂಬ್ರಮನೆ ಚಂದ್ರಶೇಖರ್ ಕೃತಜ್ಞತೆ ತಿಳಿಸಿದರು. ಪ್ರಧಾನ ಕಾರ್ಯದರ್ಶಿಗಳಾದ ಕೆ.ಎನ್.ಉರಾಳ್ ಸರ್ವರನ್ನೂ ವಂದಿಸಿದರು. ಕಾರ್ಯದರ್ಶಿಗಳಾದ ನರಸಿಂಹ ಭಟ್ ಅತಿಥಿಗಳನ್ನು ಪರಿಚಯಿಸಿ ಕಾರ್ಯದರ್ಶಿ ವಿ.ಸತೀಶ್ ಮತ್ತು ನಿರ್ದೇಶಕರಾದ ವಿನುತ ಮುರಳೀಧರ ನಿರೂಪಿಸಿದರು.

ಜಾಲತಾಣದವಿಳಾಸ:

www.brahmanasanghatth.com

* * *

## ಸರ್ವಸದಸ್ಯರ ಸಭೆ

ಬ್ರಾಹ್ಮಣ ಸಂಘ ತೀರ್ಥಹಳ್ಳಿ ತಾಲ್ಲೂಕು ರಿ. ಇದರ ಸರ್ವಸದಸ್ಯರ ಸಭೆಯು ದಿನಾಂಕ 24ನೇ ನವಂಬರ್ 2021ರ ಮಧ್ಯಾಹ್ನ ಗಾಯತ್ರೀ ಮಂದಿರದಲ್ಲಿ ನಡೆಯಿತು. ಶ್ರೀಮತಿ ಚೈತ್ರ ಅರುಣಕುಮಾರ್

Generated by Foxit PDF Creator © Foxit Software
http://www.foxitsoftware.com For evaluation only.

Generated by Foxit PDF Creator © Foxit Software
http://www.foxitsoftware.com For evaluation only.



ಪ್ರಾರ್ಥನೆಯೊಂದಿಗೆ ಸಭೆ ಆರಂಭವಾಯಿತು. ಬ್ರಾಹ್ಮಣ ಸಂಘದ ನಿರ್ದೇಶಕರಾದ ರಾಘವೇಂದ್ರ ಆಚಾರ್ಯ ಸರ್ವಸದಸ್ಯರನ್ನು ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಹರೀಶ್ ಸಭಾ ತಿಳುವಳಿಕೆಯನ್ನು ವಾಚಿಸಿದರೆ ಹಿಂದಿನ ಸಭೆಯ ನಡವಳಿಕೆಯನ್ನು ಸತೀಶ್ ವಿ. ಹಾಗೂ ನರಸಿಂಹ ಭಟ್ ಮಂಡಿಸಿದರು. 2020–21ರ ಅಂದಾಜು ಮೀರಿದ ವೆಚ್ಚಗಳಿಗೆ ಮಂಜೂರಾತಿಯನ್ನು ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕೆ. ಎನ್. ಉರಾಳ್ ಮಂಡಿಸಿ ಅಂಗೀಕಾರ ಪಡೆದರು. ಸಾಲಿನ ಆಡಳಿತ ವರದಿಯನ್ನು 2021–22ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಿ ಅಂಗೀಕಾರವನ್ನು ಸಂಘದ ಕೋಶಾಧಿಕಾರಿಗಳಾದ ಡಾ. ಎನ್.ಎಸ್. ಮನೋಹರ ರಾವ್ ಪಡೆದರು. 2021–22, 2022–23, 2023–24ನೇ ಸಾಲಿನ ತಾಲ್ಲೂಕು ಪ್ರತಿನಿಧಿಗಳ ಹೆಸರನ್ನು ಸಭಾಧ್ಯಕ್ಷರೂ ಹಾಗು ಸಂಘದ ಅಧ್ಯಕ್ಷರಾದ ತುಂಬ್ರಮನೆ ಚಂದ್ರಶೇಖರ್ ಪ್ರಕಟಿಸಿದರು. ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಹಕಾರ ನೀಡಿದ ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೂ ಹಾಗು ಉತ್ತಮ ಸಲಹೆಗಳನ್ನು ನೀಡುತ್ತಾ ಸರ್ವ ರೀತಿಯಲ್ಲೂ ಸಹಕರಿಸುತ್ತಿರುವ ಸಮಾಜ ಬಾಂಧವರ ನೆರವನ್ನು ನೆನೆದರು. ಕಾರ್ಯದರ್ಶಿಗಳಾದ ಹರೀಶ್ ಸಭೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ ಎಲ್ಲರಿಗೂ ವಂದನೆ ಸಲ್ಲಿಸಿದರು.

## ಹಿರಿಯ ಸಾಧಕರಿಗೆ ಸನ್ಮಾನ :

**ಧಾರ್ಮಿಕ ಕ್ಷೇತ್ರ ( ಪುರೋಹಿತರು)**



**ಶ್ರೀ ಗಣೇಶ ಭಟ್ಟರು,** ಶ್ರೀಯುತರು ಮೂಲತಃ ಹೊಸನಗರ ತಾಲ್ಲೂಕಿನ ಕಡಕೋರೆ ಗ್ರಾಮದಲ್ಲಿ ಪುರೋಹಿತರಾಗಿ ಸುಮಾರು 6ದಶಕಗಳ ಸುಧೀರ್ಘ ಸೇವೆಯನ್ನು ಸಲ್ಲಿಸಿ ಇಂದು ನಮ್ಮ ಸಂಘದಿಂದ ತಾಲ್ಲೂಕಿನ ಎಲ್ಲ ವಿಪ್ರ ಬಾಂಧವರ ಪರವಾಗಿ ಸನ್ಮಾನಿಸಲ್ಪಡುತ್ತಿರುವುದು ನಮಗೆಲ್ಲ ಸಾರ್ಥಕ್ಯದ ಬಹು ಸಂತೋಷದ ಸಂಗತಿ. ತಮ್ಮ 80ರ ಇಳಿವಯಸ್ಸಿನಲ್ಲಿಯೂ ತಮ್ಮ ವೃತ್ತಿಯನ್ನು ಮುಂದುವರೆಯಿಸಿಕೊಂಡು ಬರುತ್ತಿರುವ ವೇ॥ ಶ್ರೀ ಎಸ್. ಗಣೇಶ ಭಟ್ಟರ ವೃತ್ತಿಗೌರವ ಅನುಕರಣೀಯ ಮತ್ತು ಅಭಿನಂದನಾರ್ಹವಾದುದು.

ದಿನಾಂಕ : 07–09–1942ರಲ್ಲಿ ಜನಿಸಿದರು. ತಂದೆ ಶ್ರೀ ಸೀತಾರಾಮ ಭಟ್ಟರು ತಾಯಿ ಶ್ರೀಮತಿ ಸೀತಾಲಕ್ಷ್ಮಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಪೌರೋಹಿತ್ಯ ಮತ್ತು ಕೃಷಿಯನ್ನು ವೃತ್ತಿಯಾಗಿ ಸ್ವೀಕರಿಸಿದರು. ಹುಲಿಕಲ್ ಶ್ರೀ ನರಸಿಂಹ ಭಟ್ಟರಿಂದ ಶ್ರಾದ್ಧಪ್ರಯೋಗ ಮುಂತಾದವುಗಳನ್ನು ಕಲಿತು ಪೌರೋಹಿತ್ಯ ವೃತ್ತಿಯಲ್ಲಿ ಉನ್ನತಿಯನ್ನು ಪಡೆದರು. ಹೊಸನಗರ ತಾಲ್ಲೂಕು ಉಳ್ತಿಗ ಗ್ರಾಮದ ಐದುಬಳ್ಳಿಯು ವರಾಹಿ ಯೋಜನೆಯಲ್ಲಿ ಮುಳುಗಡೆಯಾದ ನಂತರ ಕೊಪ್ಪ ತಾಲ್ಲೂಕಿನ ಕಮ್ಮಕ್ಕಿಯಲ್ಲಿ ವಾಸ್ತವ್ಯ ಮಾಡಿ ಪುನಃ ಕೃಷಿ ಮತ್ತು ಪೌರೋಹಿತ್ಯ ವೃತ್ತಿಯನ್ನು ಮುಂದುವರೆಸಿಕೊಂಡು ಜನಾನುರಾಗಿಯಾಗಿದ್ದಾರೆ. ಪ್ರಸ್ತುತ ತೀರ್ಥಹಳ್ಳಿ ತಾಲೂಕಿನ ಬಸವಾನಿಯಲ್ಲಿ ವಾಸವಾಗಿದ್ದು ಪೌರೋಹಿತ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ ಹಾಗೂ ಸಮಾಜಕ್ಕೆ ಮಾರ್ಗದರ್ಶಕರಾಗಿದ್ದಾರೆ.

ಶ್ರೀಯುತರ ಪತ್ನಿ ಯಶೋದಮ್ಮ, ಶೃಂಗೇರಿ ತಾಲ್ಲೂಕಿನ ಮರತೆಯವರು. ಇವರದು ಓರ್ವ ಮಗ ಇಬ್ಬರು ಹೆಣ್ಣುಮಕ್ಕಳ ಸಂತೃಪ್ತ ಜೀವನ. ದಯಾಮಯನಾದ ಭಗವಂತನು ಶ್ರೀಯುತರಿಗೆ ಅವರ ಕುಟುಂಬವರ್ಗಕ್ಕೆ ಸುಧೀರ್ಘ ಆಯುರಾರೋಗ್ಯ ಭಾಗ್ಯವನ್ನು ಕರುಣಿಸಿ ಕಾಪಾಡಲಿ ಎಂದು ಹಾರೈಸುತ್ತೇವೆ.

Generated by Foxit PDF Creator © Foxit Software
http://www.foxitsoftware.com For evaluation only.



**ಕೃಷಿ ಕ್ಷೇತ್ರ : ಶ್ರೀಯುತ ಜಿ. ಕೆ. ಎಂ. ಮಂಜುನಾಥ ಭಟ್ಟ, ಕಾರ್ಕ್ಕೋಡ್ಲು** ಸಾಗರ



ತಾಲ್ಲೂಕಿನ ಗೋಟಗಾರು ಮೂಲದವರಾಗಿ ತೀರ್ಥಹಳ್ಳಿ ತಾಲ್ಲೂಕಿನ ಮಹಾಬಲೇಶ್ವರ ಭಟ್ಟ ಮತ್ತು ಲಕ್ಷ್ಮಮ್ಮ ದಂಪತಿಗಳ ಹಿರಿಯ ಪುತ್ರ ಶ್ರೀ ಜಿಕೆ ಎಂ ಮಂಜುನಾಥ ಭಟ್ಟರು ತೀರ್ಥಹಳ್ಳಿ ತಾಲೂಕಿನ ಉತ್ತಮ – ಅನುಭವಿ ಕೃಷಿಕರು. ಕೃಷಿಯಲ್ಲಿ ಇವರ ಆಸಕ್ತಿ ಮತ್ತು ಸಾಧನೆ ಅನುಕರಣೀಯ. ಆಧುನಿಕ ವೈವಿಧ್ಯಮಯ ಕೃಷಿ ಮಾಡಲಿಚ್ಛಿಸುವವರು ಇವರ ತೋಟಗಳಿಗೆ ಒಮ್ಮೆಯಾದರೂ ಭೇಟಿಕೊಟ್ಟು ಕಲಿಯಬೇಕಾದುದು ಬಹಳಷ್ಟಿದೆ. ವಿದ್ಯಾಭ್ಯಾಸದ ನಂತರ ತಂದೆಯವರ ಜೊತೆಯಲ್ಲಿ ಕೃಷಿ ಚಟುವಟಿಕೆಯಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡರು. ಭತ್ತ, ಅಡಿಕೆಗಷ್ಟೇ ಸೀಮಿತವಾಗದೆ ಕಾಳುಮೆಣಸು, ಗೇರು, ತೆಂಗು ಹೀಗೆ ವೈವಿಧ್ಯಮಯ ಬೆಳೆ ಬೆಳೆಯುತ್ತಿರುವರು. ಗ್ಲ್ಯಾಡಿಯೋಲಾಸ್ ಹೂವಿನ ಕೃಷಿಯಲ್ಲೂ ಪರಿಣಿತರು, ಇತ್ತೀಚೆಗೆ ಶ್ರೀಗಂಧದ ಕೃಷಿಯಲ್ಲಿ ಪ್ರಯೋಗಗಳನ್ನೂ ನಡೆಸುತ್ತಾ ಪ್ರಗತಿಪರ ಕೃಷಿಕರೆನಿಸಿಕೊಂಡಿರುವರು. ಕೃಷಿ ಕ್ಷೇತ್ರದಲ್ಲಿನ ಇವರ ಸಾಧನೆಗಳಿಗಾಗಿ ರಾಜ್ಯೋತ್ಸವ ಸನ್ಮಾನದ ಜೊತೆಯಲ್ಲಿ ತೀರ್ಥಹಳ್ಳಿ ತೋಟಗಾರಿಕಾ ಇಲಾಖೆಯಿಂದ ಬಹುಮಾನಗಳನ್ನೂ ಪಡೆದಿರುವರು.

ಹುಂಚದಕಟ್ಟೆಯ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ 25 ವರ್ಷಗಳ ಕಾಲ ನಿರಂತರ ನಿರ್ದೇಶಕರಾಗಿ ಹಾಗು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ತಾಲ್ಲೂಕು ಅಡಿಕೆ ಬೆಳೆಗಾರರ ಸಂಘದ ನಿರ್ದೇಶಕರಾಗಿರುವುದಲ್ಲದೆ ಇನ್ನೂ ಹಲವು ಸಂಘ – ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವವರು.

ಇವರ ಶ್ರೀಮತಿಯವರ ತವರೂರು ಕಾರ್ಗಲ್ ಸಮೀಪದ ಕೆಪ್ಪಗೆ. ಶ್ರೀಮತಿ ಪ್ರೇಮಲೀಲಾ ಪತಿಯೊಂದಿಗೆ ಕೃಷಿ ಚಟುವಟಿಕೆಯಲ್ಲಿ, ಹೈನುಗಾರಿಕೆಯಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದ್ದಾರೆ. ಈ ದಂಪತಿಗಳಿಗೆ ಓರ್ವಪುತ್ರ ಮತ್ತು ಮೂವರು ಪುತ್ರಿಯರು ಮೂವರು ಪುತ್ರಿಯರೂ ವಿದೇಶದಲ್ಲಿ ನೆಲೆಸಿರುವರು. ಇವರ ಪುತ್ರ ಬಿ. ಇ. ಪದವಿ ಪಡೆದು ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಯುತ ಮಂಜುನಾಥ ಭಟ್ಟರಿಗೆ ಮೂವರು ಸಹೋದರರು ಹಾಗೂ ಒಬ್ಬ ಸಹೋದರಿ ಇರುವರು. ಸಹೋದರರೊಬ್ಬರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಎಜಿಎಮ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನಿಬ್ಬರು ಕಾರ್ಕ್ಕೋಡ್ಲಿನಲ್ಲಿಯೇ ಕೃಷಿಕರಾಗಿದ್ದಾರೆ. ಎಲ್ಲರದೂ ಸುಖೀ ಸಂಸಾರ.

ಕೃಷಿ ಪ್ರಧಾನ ತೀರ್ಥಹಳ್ಳಿ ತಾಲ್ಲೂಕಿನ ಒಬ್ಬ ಉತ್ತಮ ಅನುಕರಣೀಯ ಕೃಷಿಕ ಶ್ರೀ ಮಂಜುನಾಥ ಭಟ್ಟರನ್ನು ಸನ್ಮಾನಿಸುವುದು ನಮಗೆಲ್ಲರಿಗೂ ಹೆಮ್ಮೆಯ – ಸಂತೋಷದ ಸಂಗತಿ. ಶ್ರೀ ಗಾಯತ್ರೀ ಮಾತೆಯು ಅವರ ಕುಟುಂಬದವರೆಲ್ಲರಿಗೂ ಆಯುರಾರೋಗ್ಯ – ಸಕಲ ಸಂಪದವನ್ನು ಕರುಣಿಸಿ ಸದಾ ಕಾಪಾಡಲಿ ಎಂದು ಹಾರೈಸುತ್ತೇವೆ.

**ಶೈಕ್ಷಣಿಕ ಕ್ಷೇತ್ರ : ಶ್ರೀ ಎನ್. ವಿ. ರಮೇಶ್, ಕೆ. ಸಿ. ರಸ್ತೆ, ತೀರ್ಥಹಳ್ಳಿ**



ಶೈಕ್ಷಣಿಕ ಕ್ಷೇತ್ರಕ್ಕೆ ಸುಧೀರ್ಘ ಅವಧಿಯ, ಸಾರ್ಥಕ ಅನುಕರಣೀಯ ಸೇವೆ ಸಲ್ಲಿಸಿದ ರಾಷ್ಟ್ರ–ರಾಜ್ಯ ಪ್ರಶಸ್ತಿ ಪಡೆದ ಮಾದರಿ ಶಿಕ್ಷಕ ಶ್ರೀ ಎನ್. ವಿ. ರಮೇಶ್ ರವರನ್ನು ಸನ್ಮಾನಿಸು ತ್ತಿರುವುದು ತೀರ್ಥಹಳ್ಳಿ ತಾಲ್ಲೂಕಿನ ವಿಪ್ರಬಾಂಧವ ರೆಲ್ಲರಿಗೂ ಬಹಳ ಸಂತಸದ–ಹೆಮ್ಮೆಯ ಸಂಗತಿ. 1967 ರಿಂದ2014ರ ಅವಧಿಯಲ್ಲಿ ಎಂ.ಎಡ್. ಪದವೀಧರ ರಾದ ಅವರು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಕೇಂದ್ರ (ಟಿ.ಸಿ.ಹೆಚ್.) ಪ್ರೌಢಶಾಲಾ ಶಿಕ್ಷಕರ ತಬೇತಿ ಸಂಸ್ಥೆ (ಬಿ ಇಡಿ)ಗಳಲ್ಲಿ

ಶಿಕ್ಷಕರಾಗಿ ದಕ್ಷ-ಸಾರ್ಥಕ ಸೇವೆ ಸಲ್ಲಿಸಿದ್ದಾರೆ.

ಪ್ರತಿ ವರ್ಷ ಜನವರಿ 26ರಂದು ನಡೆಸುವ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಕ್ಕಳಿಂದ ವಿಶೇಷ ಸಾಮೂಹಿಕ ವ್ಯಾಯಾಮ ಕಾರ್ಯಕ್ರಮಕ್ಕೆ ಮಕ್ಕಳಿಗೆ ತರಬೇತಿ ಮತ್ತು ಮಾರ್ಗದರ್ಶನ ಹಲವು ವರ್ಷಗಳ ಕಾಲ ನಡೆಸಿದ್ದಾರೆ. ಹಣಕಾಸಿನ ಖರ್ಚಿಲ್ಲದೆ ಅಥವಾ ಅತ್ಯಂತ ಕಡಿಮೆ ವೆಚ್ಚದಲ್ಲಿ ಗಣಿತ ಮತ್ತು ವಿಜ್ಞಾನ ಮಾದರಿಗಳನ್ನು ರಚಿಸುವುದು ಮತ್ತು ಅದರಿಂದ ಹೆಚ್ಚಿನ ಜ್ಞಾನವನ್ನು ಗಳಿಸುವುದರ ಬಗೆಗೆ ಹತ್ತಾರು ತರಬೇತಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.


ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿಜ್ಞಾನ ಮತ್ತು ಗಣಿತ ಶಾಸ್ತ್ರ ವಿಷಯಗಳನ್ನು ಅತ್ಯಂತ ಸರಳವಾಗಿ ವೈಜ್ಞಾನಿಕವಾಗಿ ಮಕ್ಕಳಿಗೆ ಬೋಧಿಸುವ ಕುರಿತು ಹಲವು ಶಿಬಿರಗಳಲ್ಲಿ ಸಂಪನ್ಮೂಲವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. 5ರಿಂದ 7ನೆ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ರಾಷ್ಟ್ರೀಯ ಶಿಕ್ಷಣ ನೀತಿಯಂತೆ ಸಾಮಾಜಿಕ ಉಪಯುಕ್ತತೆಯ ಉತ್ಪಾದನಾ ಕೆಲಸದ ಬಗೆಗೆ ಶಿಕ್ಷಕರಿಗೆ ಹತ್ತಾರು ತರಬೇತಿ ಕಾರ್ಯಾಗಾರಗಳನ್ನು ನಡೆಸಿದ್ದಾರೆ.

ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕವಾದ ಹಲವು ಪುಸ್ತಕಗಳ ರಚನೆಯನ್ನೂ ಮಾಡಿರುವುದು ಶ್ರೀ ರಮೇಶರವರ ಇನ್ನೊಂದು ಪ್ರಮುಖ ಸಾಧನೆ. 1970ರಲ್ಲಿ ಪ್ರೌಢಶಾಲ ಶಿಕ್ಷಕರಿಗೆ ಭೌತಶಾಸ್ತ್ರದಲ್ಲಿ ಸಂಪನ್ಮೂಲ ಪುಸ್ತಕದ ರಚನೆ, 1985ರಲ್ಲಿ ವಯಸ್ಕರ ಶಿಕ್ಷಣದ ಬಗೆಗೆ ಗಣಿತ ಪುಸ್ತಕ ಬರವಣಿಗೆ, 8ಮತ್ತು 10ನೆ ತರಗತಿ ಮಕ್ಕಳಿಗಾಗಿ 1999ರಿಂದ 2004ರವರೆಗೆ ಗಣಿತ ಪಠ್ಯಪುಸ್ತಕ ಬರವಣಿಗೆ ಮುಂತಾದವು ಅವರ ವೃತ್ತಿಗೆ ಸಾರ್ಥಕ್ಯವನ್ನು ತಂದುಕೊಟ್ಟಿವೆ.

1981ರಲ್ಲಿ ನಡೆಸಿದ ಭಾರತದ ಜನಗಣತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿರುವುದನ್ನು ಭಾರತ ಸರಕಾರ ಗುರುತಿಸಿ ರಾಷ್ಟ್ರಾಧ್ಯಕ್ಷರ ಬೆಳ್ಳಿ ಪದಕವನ್ನು ನೀಡಿ ಗೌರವಿಸಿರುತ್ತಾರೆ. 1999ರಲ್ಲಿ ಕರ್ನಾಟಕ ಸರಕಾರವು ರಾಜ್ಯದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಶ್ರೀ ಎನ್. ವಿ. ರಮೇಶ್ ರವರು ಶ್ರೀಯುತ ನೆಲ್ಲಿಸರ ವೆಂಕಟರಾವ್ ಮತ್ತು ಶ್ರೀಮತಿ ಸುಶೀಲಮ್ಮ ಅವರ ಪುತ್ರರಾಗಿ 9-10-1946ರಂದು ಜನಿಸಿದರು. ಇವರಿಗೆ ಇಬ್ಬರು ಸಹೋದರರು ಮತ್ತು ಒಬ್ಬರು ಸಹೋದರಿ. ಇವರ ಪತ್ನಿ ಶ್ರೀಮತಿ ಶೈಲಶ್ರೀ ರಮೇಶ್‌ರವರು ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ನಮ್ಮ ಸಂಘದ ಕಾರ್ಯಕಾರೀ ಸಮಿತಿಯ ನಿರ್ದೇಶಕರಾಗಿ ಮೂರು ಅವಧಿಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಮಕ್ಕಳಿಗೆ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮದೇ ಆದ ವಿಶೇಷ ತರಬೇತಿ ಮತ್ತು ಹಣಕಾಸಿನ ಅವಶ್ಯಕತೆ ಉಳ್ಳವರಿಗೆ ಸಹಾಯಧನ ನೀಡಿ ಪ್ರೋತ್ಸಾಹಿಸಿದ್ದಾರೆ. ಸಾಂಸ್ಕೃತಿಕ ಮತ್ತು ಕಲಾ ಕ್ಷೇತ್ರಗಳಲ್ಲಿ ಆಸಕ್ತಿಯುಳ್ಳ ಅವರು ಟಿ. ವಿ. ಧಾರಾವಾಹಿಗಳು ಮತ್ತು ಸಿನೇಮಾಗಳಲ್ಲೂ ಕಾರ್ಯನಿರ್ವಹಿಸಿದ್ದಾರೆ. ನಮ್ಮ ಸಂಘದ ಶಾಶ್ವತ ಅಭಿವೃದ್ಧಿ ಸಮಿತಿಯ ಸದಸ್ಯರೂ ಆಗಿದ್ದಾರೆ. ಶ್ರೀ ರಮೇಶ್ ಮತ್ತು ಶೈಲಶ್ರೀ ದಂಪತಿ ಮೂವರು ಪುತ್ರಿಯರನ್ನು ಪಡೆದಿದ್ದಾರೆ. ಭಗವಂತನು ಶ್ರೀ ಎನ್. ವಿ. ರಮೇಶ್ ಕುಟುಂಬವರ್ಗದವರೆಲ್ಲರಿಗೂ ಆಯುರಾರೋಗ್ಯ ಸಕಲ ಸಂಪದವನ್ನು ಪಾಡಲಿ ಎಂದು ಹಾರೈಸುತ್ತೇವೆ.

**ಸಾಂಸ್ಕೃತಿಕ ಕ್ಷೇತ್ರ : ಶ್ರೀ ಅನಂತ ಭಟ್ಟರು**




ಶ್ರೀ ... ಭಟ್ಟರು ಮತ್ತು ಶ್ರೀಮತಿ ನಾಗವೇಣಮ್ಮ ಇವರ ಪುತ್ರರು ಶ್ರೀ ಹೆಚ್. ಆರ್. ಅನಂತಭಟ್ಟರು. ಇವರದು ಕೃಷಿ ಕುಟುಂಬ. ಬಿ.ಎಸ್ಸಿ ಪದವಿಧರರು. ಕೃಷಿ ಕುಟುಂಬವಾದ್ದರಿಂದ ಕೃಷಿಗೆ ಸಂಬಂಧಿಸಿದ ಎಲ್ಲಾ ಕೆಲಸಗಳಲ್ಲಿ ಅನುಭವ. ತಂದೆಯವರು ಅಡಿಗೆ ಕೆಲಸದಲ್ಲಿ ಪರಿಣಿತರು ಹಾಗಾಗಿ ಇವರೂ ಅವರ ಸಂಪರ್ಕದಿಂದ ಅಡಿಗೆಯಲ್ಲಿ ವಿಶೇಷ ಅನುಭವ ಪಡೆದಿದ್ದಾರೆ. ಹೋಟೆಲ್ ಉದ್ಯಮವನ್ನು ನಡೆಸುತ್ತಿದ್ದು ಸಹಜವಾಗಿ

Generated by Foxit PDF Creator © Foxit Software
http://www.foxitsoftware.com For evaluation only.



ದಕ್ಷಿಣ/ಉತ್ತರ ಭಾರತದ ಖಾದ್ಯಗಳನ್ನು ತಯಾರು ಮಾಡುವುದರಲ್ಲಿ ಪರಿಣಿತಿ. ಉತ್ತರ ಭಾರತದ 42 ಬಗೆಬಗೆಯ ಖಾದ್ಯಗಳು ಮಾಡುವುದು ಕರಗತವಾಗಿದೆ.

ಚಿಕ್ಕಪ್ಪನವರಾದ ಶ್ರೀ ಜನಾರ್ದನಭಟ್ಟರ ನಾಟಕದ ಅಭಿನಯದಿಂದಾಗಿ ಇವರಲ್ಲೂ ನಾಟಕದ ಬಗ್ಗೆ ವಿಶೇಷ ಒಲವು ಇದರಿಂದಾಗಿ ರಂಗಭೂಮಿ, ಕಿರುತೆರೆ, ಚಲನಚಿತ್ರಗಳಲ್ಲಿ ಅಭಿನಯ. ಮುಖ್ಯವಾಗಿ ಚಲನಚಿತ್ರರಂಗದ ಭೀಷ್ಮರಾದ ದಿ. ಶ್ರೀ ಜಿ. ವಿ. ಅಯ್ಯರ್‌ರವರ ಶಿಷ್ಯರಾದ ಜಿ. ಮೂರ್ತಿಯವರ ನಿರ್ದೇಶನದ ಶಂಕರ ಪುಣ್ಯಕೋಟಿಯಲ್ಲಿ ಅಭಿನಯ. ಗಾಳಿಪಟ ಮತ್ತು ಮುಂಗಾರು ಚಲನಚಿತ್ರಗಳಲ್ಲಿ ಅಭಿನಯ. ಈಗಲೂ ಸಹ ಕಿರುತೆರೆ, ಚಲನಚಿತ್ರಗಳಲ್ಲಿ ಅಭಿನಯವನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಹೀಗೆ ರಂಗಭೂಮಿ, ಕಿರುತೆರೆ ಮತ್ತು ಚಲನಚಿತ್ರಗಳಲ್ಲಿ ತಮ್ಮ ಛಾಪು ಮೂಡಿಸಿರುತ್ತಾರೆ.

2008ರಲ್ಲಿ ಹಾಸನದಲ್ಲಿ ನಡೆದ ನಾಟಕೋತ್ಸವದಲ್ಲಿ ರಂಗಭೂಮಿ ನಟನೆಗಾಗಿ ನಾಟಕ ಅಕಾಡೆಮಿಯಿಂದ ಸನ್ಮಾನ.


2008ರಲ್ಲಿ ನಡೆದ ರಾಜ್ಯ ಚಲನಚಿತ್ರ ಪ್ರಶಸ್ತಿ ಸ್ಪರ್ಧೆಯಲ್ಲಿ ಇವರು ನಟಿಸಿದ ಶಂಕರ ಪುಣ್ಯಕೋಟಿ ಚಲನಚಿತ್ರಕ್ಕೆ ತೃತೀಯ ಬಹುಮಾನ.

2018ರಲ್ಲಿ ವಿಶ್ವರಂಗ ಭೂಮಿ ದಿನಾಚರಣೆ ಬಗ್ಗೆ ತೀರ್ಥಹಳ್ಳಿ ನಟಮಿತ್ರರು (ರಿ) ಸಂಸ್ಥೆಯಿಂದ ರಂಗಭೂಮಿ ಸೇವೆಗಾಗಿ ಸನ್ಮಾನ. ಹೀಗೆ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡು ಕಲಾಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇವರ ಶ್ರೀಮತಿ ದಿವ್ಯಮಣಿ ಆಲ್ಮನೆಯವರು ರಂಗಾಸಕ್ತರು, ಸಂಗೀತ ಪ್ರಿಯರು. ಶ್ರೀ ಅನಂತಭಟ್ಟ ಮತ್ತು ಶ್ರೀಮತಿ ದಿವ್ಯಮಣಿ ದಂಪತಿಗೆ ಇಬ್ಬರು ಪುತ್ರರು. ಇಬ್ಬರೂ ತಾಂತ್ರಿಕ ಶಿಕ್ಷಣವನ್ನು ಪಡೆದು ಸ್ವಂತ ಉದ್ಯಮಿಗಳಾಗಿದ್ದಾರೆ. ಓರ್ವ ಕಿರಿಯ ಸಹೋದರ ಕಿರುತೆರೆ ಹಾಗೂ ಚಲನಚಿತ್ರ ನಟ ಮತ್ತು ರಂಗ ನಟ. ಮೂವರು ಸಹೋದರಿಯರು. ಸುಖೀ ಕುಟುಂಬ. ಇವರ ಕುಟುಂಬದ ಎಲ್ಲರೂ ಕಲಾಸೇವೆಯಲ್ಲಿ ನಿರತರಾಗಿದ್ದಾರೆ.

ನಮ್ಮ ಸಂಘವು ಇವರನ್ನು ಸನ್ಮಾನಿಸಲು ಬಹಳ ಸಂತೋಷ ಮತ್ತು ಹೆಮ್ಮೆ ಪಡುತ್ತದೆ. ಶ್ರೀ ಗಾಯತ್ರೀ ಮಾತೆಯು ಇವರಿಗೂ ಇವರ ಕುಟುಂಬ ವರ್ಗದವರೆಲ್ಲರಿಗೂ ಆಯುರಾರೋಗ್ಯ – ಸಕಲ ಸೌಭಾಗ್ಯಗಳನ್ನು ಕರುಣಿಸಿ ಕಾಪಾಡಲಿ ಎಂದು ಹಾರೈಸುತ್ತೇವೆ.

**ಸಮಾಜ ಸೇವೆ : ಶ್ರೀ ರವಿರಾಜ ವೈದ್ಯ**

ಕುಂದಾಪುರ ತಾಲ್ಲೂಕಿನ ಉಪ್ಪುಂದದಲ್ಲಿ 1954ರಲ್ಲಿ ಜನನ. ತಂದೆ ದಿವಂಗತ ಯು. ವಾಸುದೇವ ವೈದ್ಯ. ತಾಯಿ ದಿವಂಗತ ವಿಜಯಲಕ್ಷ್ಮಿ. ಮೈಸೂರು ವಿಶ್ವವಿದ್ಯಾಲಯದಿಂದ ಬಿ. ಎ. ಪದವಿಯನ್ನೂ ಕರ್ನಾಟಕ ವಿಶ್ವವಿದ್ಯಾಲಯದಿಂದ ಮನಶಾಸ್ತ್ರದಲ್ಲಿ ಎಂ. ಎ. ಪದವಿ ಪಡೆದಿರುವರು. ಸೀನಿಯರ್ ಆಡಿಟ್ ಆಫೀಸರಾಗಿ ನಿವೃತ್ತರಾದರು. ಬೆಂಗಳೂರು, ಹುಬ್ಬಳ್ಳಿ, ಆಂಧ್ರಪ್ರದೇಶ, ಸಿಕ್ಕಿಂ ಮುಂತಾದೆಡೆ ಸೇವೆ ಸಲ್ಲಿಸಿರುತ್ತಾರೆ. ವೃತ್ತಿ ಜೀವನದುದ್ದಕ್ಕೂ ಲಂಚವಿಲ್ಲದೆ ಪ್ರಾಮಾಣಿಕ ಸೇವೆ ಸಲ್ಲಿಸಿರುವುದು ಇವರ ವಿಶೇಷತೆ. ಇದಕ್ಕಾಗಿ ಪ್ರಶಸ್ತಿಯೂ ಇವರನ್ನರಸಿ ಬಂದಿದೆ. ಕಾಲೇಜು ದಿನಗಳಲ್ಲಿ ಆಶುಭಾಷಣ ಸ್ಪರ್ಧೆಯಲ್ಲಿ ಅಖಿಲ ಭಾರತ ವಿಶ್ವವಿದ್ಯಾಲಯ ಮಟ್ಟದಲ್ಲಿ ಬಹುಮಾನ ಪಡೆದು ಉತ್ತಮ ಭಾಷಣಕಾರರೆಂದೂ ಗುರುತಿಸಿಕೊಂಡಿದ್ದಾರೆ.



ಬ್ರಹ್ಮಾವರ ತಾಲ್ಲೂಕಿನ ಹಂಗಾರಕಟ್ಟೆಯ ಭಾರತಿ ಇವರ ಧರ್ಮಪತ್ನಿ. ಪತಿಯ ಎಲ್ಲಾ ಸಾಮಾಜಿಕ ಕಾರ್ಯಗಳಲ್ಲಿ ಬೆನ್ನೆಲುಬಾಗಿ ನಿಂತು ಮಕ್ಕಳ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿರುವ ಸದ್ಗೃಹಿಣಿ. ಶ್ರೀಯುತರಿಗೆ ಓರ್ವ ಪುತ್ರ ಮತ್ತು ಓರ್ವ ಪುತ್ರಿ. ತೀರ್ಥಹಳ್ಳಿಯ ದೊಡ್ಡಮನೆಕೇರಿಯಲ್ಲಿ ಅಕ್ಷಯ ಗ್ರಾನೈಟ್ಸ್ ಸಂಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಪುತ್ರ ರೋಹಿತ್ ವೈದ್ಯ. ಮೊಮ್ಮಗಳು ಕುಮಾರಿ ವಿಭಾ.

ಇವರಿಗೆ ಓರ್ವ ಸಹೋದರ ಹಾಗೂ ಮೂವರು ಸಹೋದರಿಯರಿದ್ದಾರೆ. ಅಕ್ಕ ವರಮಹಾಲಕ್ಷ್ಮಿ ಹೊಳ್ಳ


ಸಾಹಿತಿ. ಅನೇಕ ಪುಸ್ತಕಗಳನ್ನು ಬರೆದಿರುವರು. ಇವರ ಪತಿ ಉಪ್ಪುಂದ ಚಂದ್ರಶೇಖರ ಹೊಳ್ಳ ಸಾಹಿತ್ಯ ಪರಿಷತ್ತು ಮತ್ತು ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವರು.

2014ರಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತರಾದ ವೈದ್ಯರು ಸಮಾಜಮುಖಿಯಾಗಿ ತೆರೆದುಕೊಂಡರು. ಆರ್ಥಿಕವಾಗಿ ಹಿಂದುಳಿದ ವಿಕಲಚೇತನರು, ಅನಾಥರು ಮತ್ತು ಹಿರಿಯ ನಾಗರಿಕರಿಗೆ ಸಹಾಯ ಮಾಡುವ ಸದುದ್ದೇಶದಿಂದ ವಾಗ್ದೇವಿ ಚಾರಿಟೇಬಲ್ ಟ್ರಸ್ಟನ್ನು 2015ರಲ್ಲಿ ಆರಂಭಿಸಿದರು. ಪ್ರಸ್ತುತ ಟ್ರಸ್ಟಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವರು. ಸ್ವಾಭಿಮಾನಿ ವೈದ್ಯರು ದೇಣಿಗೆಗಾಗಿ ಅವರಿವರತ್ತ ಕೈ ಚಾಚದೆ ತಮ್ಮ ಗಳಿಕೆಯ ದೊಡ್ಡ ಪಾಲೊಂದನ್ನು ಬ್ಯಾಂಕಿನಲ್ಲಟ್ಟು ಬರುವ ಬಡ್ಡಿಯಿಂದ ನೆರವು ನೀಡತೊಡಗಿದರು. ಆರು ವರ್ಷಗಳ ಹಿಂದೆ ಸ್ಥಾಪನೆಯಾದ ಟ್ರಸ್ಟ್ ಸೊಪ್ಪುಗುಡ್ಡೆಯ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳೂ ಸೇರಿದಂತೆ ನೂರಾರು ವಿಕಲಚೇತನರು, ಬಡ ಮಕ್ಕಳು, ಅನಾಥರಿಗೆ ಆರ್ಥಿಕ ನೆರವು ನೀಡುವುದರ ಜೊತೆಯಲ್ಲಿ ಅಗತ್ಯ ಸಾಧನಗಳನ್ನು ನೀಡುತ್ತಿದೆ. ಸಹಾಯ ಕೇಳಿ ಬಂದ ಅರ್ಹರಿಗೆ ವೈದ್ಯರು ಇಲ್ಲವೆಂದದ್ದೇ ಇಲ್ಲ. ತನ್ನೆಲ್ಲಾ ಸ್ನೇಹಿತರ ಬಳಗ ಮತ್ತು ಸಹೋದ್ಯೋಗಿ ಮಿತ್ರರನ್ನು ಸಂಪರ್ಕಿಸಿ ನೊಂದವರಿಗೆ ಸಹಾಯ ಮಾಡುತ್ತಿರುವುದು ಇವರ ಮಾನವೀಯತೆಗೆ ಸಾಕ್ಷಿ. ತನ್ನ ಬಂಧು– ಬಳಗವಲ್ಲದವರ ಕಷ್ಟಗಳಿಗೂ ಮರುಗುವ ಹೃದಯವಂತರಿವರು.

ಇನ್ನೊಬ್ಬರ ತೊಳಲಾಟ, ನೋವು, ಸಮಸ್ಯೆಗಳನ್ನು ತನ್ನದೇ ಎಂದು ಭಾವಿಸಿ ಸ್ಪಂದಿಸುವ ಮನಃಸ್ಥಿತಿ ವೈದ್ಯರದ್ದು. ಇಂಗ್ಲಿಷ್ ಭಾಷೆಯ ಸಂವಹನ ಕಷ್ಟವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಆತ್ಮವಿಶ್ವಾಸದ ಕೊರತೆಯಿಂದ ಬಳಲಬಾರದೆಂದು ಆಂಗ್ಲ ಭಾಷೆಯ ಸಂವಹನದ ತರಗತಿಗಳನ್ನು ಉಚಿತವಾಗಿ ನಡೆಸುತ್ತಿರುವರು. ನೊಂದವರ ಕಷ್ಟಗಳಿಗೆ ಸ್ಪಂದಿಸುವ ರವಿರಾಜ್ ವೈದ್ಯರ ಕಾರ್ಯವನ್ನು ಗುರುತಿಸಿ ಸಮಾಜಸೇವಾ ಕ್ಷೇತ್ರದಡಿಯಲ್ಲಿ ಅಭಿನಂದಿಸಲು ಹರ್ಷಿಸುತ್ತಿದ್ದೇವೆ.

**ಪಾಕ ಶಾಸ್ತ್ರ : ಶ್ರೀ ಶಂಕರನಾರಾಯಣ ಭಟ್ಟ – ಮೇಗರವಳ್ಳಿ (ಚೌಕ)**

ತೀರ್ಥಹಳ್ಳಿ ತಾಲ್ಲೂಕು ಮೇಗರವಳ್ಳಿ ವಾಸಿ ಶ್ರೀಯುತ ಕೆ. ಎಂ. ಅಶ್ವತ್ಥಭಟ್ ಮತ್ತು ವನಜಾಕ್ಷಮ್ಮ ಇವರ ಮಗನಾದ ಶ್ರೀ ಎ. ಹೆಚ್. ಶಂಕರನಾರಾಯಣ ಭಟ್ ರವರು 1953ರಲ್ಲಿ ಜನಿಸಿದ್ದು ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೊರೊನಕೋಟೆ ಶಾಲೆಯಲ್ಲಿ ಹಾಗೂ ಪ್ರೌಢಶಿಕ್ಷಣವನ್ನು ಕಟ್ಟೇಹಕ್ಕಲು ಪ್ರೌಢಶಾಲೆಯಲ್ಲಿ ಪಡೆದಿರುತ್ತಾರೆ. 21–05–1984ರಲ್ಲಿ ಶ್ರೀಮತಿ ಜಾನಕಮ್ಮ ಹಾಗೂ ಶ್ರೀ ಶಿವರಾಮ ಉಪಾಧ್ಯಾಯರು ಕಡಸೂರುರವರ ಮಗಳಾದ ಅನುಸೂಯರವರನ್ನು ವಿವಾಹವಾಗಿರುತ್ತಾರೆ. ಇವರಿಗೆ 3 ಜನ ಹೆಣ್ಣು ಮಕ್ಕಳಿದ್ದು , 3 ಜನರಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿ ಉತ್ತಮ ಸಂಬಂಧಗಳೊಂದಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ.





ಶ್ರೀಯುತರು 1980ರಿಂದ 1984ರವರೆಗೆ ಮೇಗರವಳ್ಳಿಯಿಂದ ಕರುಣಾಪುರ ತೆಮ್ಮೆಮನೆ ಮಾರ್ಗವಾಗಿ ಶೀರ್ನಾಳಿಯುವರೆಗೆ ಅಂಚೆ ಸಾಗಾಣಿಕೆ (ಮೈಲ್ ಕ್ಯಾರಿಯರ್) ಕರ್ತವ್ಯವನ್ನು ನಿರ್ವಹಿಸುತ್ತಾ ತನ್ನ 6 ಜನ ಅಕ್ಕ ತಂಗಿಯರ ವಿವಾಹವನ್ನು ತಾವೇ ನಿರ್ವಹಿಸಿದ್ದು ಆನಂತರ ಅಡಿಗೆ ಸಹಾಯಕರಾಗಿ ಕೇವಲ 2ರೂ.ಗಳ ಸಂಭಾವನೆಯಿಂದ ಪ್ರಾರಂಭಿಸಿ ಈ ವರೆಗೆ 45ವರ್ಷಗಳ ಸುದೀರ್ಘ ಅವಧಿಯಲ್ಲಿ ಅಡಿಗೆ ಕೆಲಸವನ್ನು ನಿರ್ವಹಿಸುತ್ತಾ ಜಹಾಂಗೀರ್, ಮೈಸೂರ್ ಪಾಕ್, ಹೋಳಿಗೆ ಇತ್ಯಾದಿ ಸಿಹಿ ತಿಂಡಿಗಳನ್ನು ತಯಾರಿಸುವಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಶ್ರೀಯುತರು 68ವರ್ಷ ವಯಸ್ಸಿನ ಹಿರಿಯ ನಾಗರಿಕರಾಗಿಯೂ ತಮ್ಮ ವೃತ್ತಿಯಲ್ಲಿ ಇಂದಿಗೂ ತೊಡಗಿಸಿಕೊಂಡಿದ್ದು ತಮ್ಮ ಸಂಸಾರದವರೊಂದಿಗೆ ಸುಖೀ ಜೀವನ ನಡೆಸುತ್ತಾ ಎಲ್ಲರಿಗೂ

Generated by Foxit PDF Creator © Foxit Software
http://www.foxitsoftware.com For evaluation only.



ವಾದರಿಯಾಗಿರುತ್ತಾರೆ. ಶ್ರೀ ಎ. ಹೆಚ್. ಶಂಕರನಾರಾಯಣ ಭಟ್ಟರು ಮತ್ತು ಇವರ ಕುಟುಂಬಕ್ಕೆ ಶ್ರೀ ಗಾಯತ್ರೀ ಮಾತೆ ಆಯುರಾರೋಗ್ಯ ಸಂಪತ್ತನ್ನು ಕರುಣಿಸಿ ಸನ್ಮಂಗಳವನ್ನುಂಟು ಮಾಡಲಿ ಎಂದು ಹಾರೈಸುತ್ತೇವೆ.

**ಸೇವಾಕ್ಷೇತ್ರ : ಶ್ರೀ ಕೆ. ಜಿ. ಕೇಶವಮೂರ್ತಿ**



ಶ್ರೀ ಕೆ.ಜಿ.ಕೆ.ಮೂರ್ತಿಯವರು ವೇ॥ ಬ್ರ॥ ಶ್ರೀ॥ ಕೆ. ಗೋಪಾಲಭಟ್ಟರು ಮತ್ತು ಸಾವಿತ್ರಮ್ಮನವರ ಪುತ್ರನಾಗಿ 12-02-1939ರಲ್ಲಿ ಕಾಸರವಳ್ಳಿಯಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸ ಕಾಸರವಳ್ಳಿ ಮತ್ತು ಬಸವಾನಿಯಲ್ಲಿ ನಡೆಯಿತು. ಶೃಂಗೇರಿ ಮಠದ ಸದ್ವಿದ್ಯಾ ಸಂಜೀವಿನಿ ಶಾಲೆಯಲ್ಲಿ ಸಂಸ್ಕೃತದ ಸಾಹಿತ್ಯ, ಹಿಂದಿ ವಿಶಾರದ ಪರೀಕ್ಷೆಯಲ್ಲಿ ತೇರ್ಗಡೆ. ಉಡುಪಿಯ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಅಲಂಕಾರ ಶಾಸ್ತ್ರ, ಹಿಂದಿ ರತ್ನ, ಕನ್ನಡ ಪಂಡಿತ ಪೂರ್ವಾರ್ಧ ಮತ್ತು ಉತ್ತರಾರ್ಧ ತೇರ್ಗಡೆ. ನಂತರ ಮಣಿಪಾಲ ಅಕಾಡೆಮಿಯಲ್ಲಿ ಬಿ. ಎಡ್. ತೇರ್ಗಡೆ. ಶ್ರೀಯುತರು ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲೀಷ್ ಸಾಹಿತ್ಯದ ಅಧ್ಯಯನ ಮಾಡಿ ನೂರಾರು ಲೇಖನಗಳನ್ನು ಬರೆದಿದ್ದಾರೆ.

ಶ್ರೀಯುತರು ಅಧ್ಯಾಪಕರಾಗಿ ಉಪನ್ಯಾಸಕರಾಗಿ ಸಹಸ್ರಾರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದ್ದಾರೆ. ಕುಂದಾಪುರ ತಾಲ್ಲೂಕಿನ ವಂಡ್ಸೆ, ಆರ್ಡಿ ತೀರ್ಥಹಳ್ಳಿ ತಾಲ್ಲೂಕಿನ ಬಸವಾನಿ, ಮಾಳೂರು, ಮೇಗರವಳ್ಳಿ, ಗುಡ್ಡೇಕೇರಿ, ಕೋಡ್ಲು, ಮೇಗರವಳ್ಳಿ ಜ್ಯೂನಿಯರ್ ಕಾಲೇಜು ತೀರ್ಥಹಳ್ಳಿಯ ಸರ್ಕಾರಿ ಟಿ.ಸಿ.ಹೆಚ್. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ 1997ರ ಫೆಬ್ರವರಿ ತಿಂಗಳಲ್ಲಿ ನಿವೃತ್ತಿ ಹೊಂದಿದ್ದಾರೆ. ಸಕಾರವು ತಾಲ್ಲೂಕು ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ. ವೃತ್ತಿಯಲ್ಲಿ ಅಧ್ಯಾಪಕರಾದರೂ ಹತ್ತು ಹಲವು ಸಮಾಜಮುಖಿ ಕಾರ್ಯಗಳಲ್ಲಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಕಲ್ಮನೆಯಲ್ಲಿ ಸಮುದಾಯ ಭವನ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳದಾನ. ಕೋಡ್ಲು ಪ್ರೌಢಶಾಲೆಗೆ ತನು,ಮನ,ಧನ ಸಹಾಯ. ಬ್ರಾಹ್ಮಣ ಸಂಘ, ತೀರ್ಥಹಳ್ಳಿ ತಾಲ್ಲೂಕು (ರಿ.) ನಲ್ಲಿ ಒಂದು ಅವಧಿಗೆ ನಿರ್ದೇಶಕರಾಗಿ, ತಾಲ್ಲೂಕು ಕೂಟ ಮಹಾಜಗತ್ತು ತೀರ್ಥಹಳ್ಳಿ ಶಾಖೆಯಲ್ಲಿ ಸ್ಥಾಪಕ ಅಧ್ಯಕ್ಷ ಮೂರು ಅವಧಿಗೆ ಕಾರ್ಯನಿರ್ವಹಣೆ ತಾಲ್ಲೂಕಿನ ನಿವೃತ್ತ ನೌಕರರ ಸಂಘದ ಸ್ಥಾಪಕ ಪ್ರಧಾನಕಾರ್ಯದರ್ಶಿ ಅಧ್ಯಕ್ಷ ಮತ್ತು ಹಿರಿಯ ಸಲಹೆಗಾರನಾಗಿ ಸೇವೆ. ಸರ್ಕಾರಿ ನೌಕರರ ಸಂಘ, ತುಂಗಾ ಕಾಲೇಜು ತೀರ್ಥಹಳ್ಳಿ, ಶ್ರೀ ರಾಘವೇಂದ್ರ ಮಠ ಕಮ್ಮರಡಿ, ವಿಪ್ರ ಟ್ರಸ್ಟ್ ಶಿವಮೊಗ್ಗ ವೃದ್ಧಾಶ್ರಮ, ಚಿಕ್ಕಳೂರು ಬನಶಂಕರಿ ದೇವಸ್ಥಾನ ಇತ್ಯಾದಿ , ಮಕ್ಕಳಿಗೆ ಪ್ರತಿಭಾ ಪುರಸ್ಕಾರ ದೇಣಿಗೆ ನೀಡಿ ತಮ್ಮ ಔದಾರ್ಯವನ್ನು ಮೆರೆದಿದ್ದಾರೆ.

ಪ್ರತಿಶಾಲೆಯ ಎಲ್ಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ವಿನಯ, ವಿಕಾಸ, ವಿಶಾಲ, ಹಾಗೂ ವಿಜಯ ಗುಂಪುಗಳ ಮೂಲಕ ಪ್ರಗತಿ. ಕೋಡ್ಲು, ರಾಮಕೃಷ್ಣಾಪುರ, ಮೇಗರವಳ್ಳಿ, ಗುಡ್ಡೇಕೇರಿ ಮತ್ತು ವಿಶ್ವತೀರ್ಥ ಪ್ರೌಢಶಾಲೆಗಳಲ್ಲಿ ಈ ಯೋಜನೆ ಜಾರಿಯಾಗಿದ್ದು ಯಶಸ್ವಿಯಾಗಿದೆ.

ಶ್ರೀ ಕೇಶವಮೂರ್ತಿ ಶ್ರೀಮತಿ ಶಾರದಾ ಅವರು ಮೂವರು ಹೆಣ್ಣುಮಕ್ಕಳು ಮತ್ತು ಒಬ್ಬ ಪುತ್ರನನ್ನು ಪಡೆದಿದ್ದಾರೆ. ಮಕ್ಕಳೆಲ್ಲರೂ ವಿವಾಹಿತರು ಪ್ರಥಮ ಪುತ್ರಿ ಬೆಂಗಳೂರಿನಲ್ಲಿ ಶಿಕ್ಷಕಿ. ದ್ವಿತೀಯ ಪುತ್ರಿ ಬೇರುಕೊಡಿಗೆಯಲ್ಲಿ ಕೃಷಿಕ ಗೃಹಿಣಿ. ತೃತೀಯ ಪುತ್ರಿ ಮಾಳೂರಿನಲ್ಲಿ ಉಪನ್ಯಾಸಕಿಯಾಗಿದ್ದಾರೆ. ಪುತ್ರ ಪ್ರಶಾಂತ ಬಿ.ಎ. ಪದವೀಧರನಾಗಿದ್ದು ವಾಣಿಜ್ಯ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದು ಕಲ್ಮನೆ ಸಂಘಟನಾ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.


ಸೇವಾ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದ ಶ್ರೀ ಕೆ. ಜಿ. ಕೇಶವಮೂರ್ತಿಯವರನ್ನು ಸನ್ಮಾನಿಸಲು ಬ್ರಾಹ್ಮಣ ಸಂಘ ತೀರ್ಥಹಳ್ಳಿ ಹೆಮ್ಮೆ ಪಡುತ್ತದೆ. ~~ಶ್ರೀಯುತರಿಗೆ ಮತ್ತು ಅವರ ಕುಟುಂಬದವರೆಲ್ಲರಿಗೂ~~ ಭಗವಂತನು ಆಯುರಾರೋಗ್ಯ ಸಕಲ ಸಂಪದವನ್ನು

Generated by Foxit PDF Creator © Foxit Software
http://www.foxitsoftware.com For evaluation only.



ಕರುಣಿಸಿ ಕಾಪಾಡಲಿ ಎಂದು ಎಲ್ಲ ವಿಪ್ರಬಾಂಧವರ ಪರವಾಗಿ ಹಾರೈಸುತ್ತೇವೆ.

**ಶ್ರೀ ಎನ್. ಎನ್. ದತ್ತಾತ್ರೇಯ ಭಟ್, ಶ್ರಮಿಕ**



ಶ್ರೀ ಎನ್. ಎನ್. ದತ್ತಾತ್ರೇಯ ಭಟ್ ಆಲ್ಮನೆ ಇವರು ಶ್ರಮಿಕ ಕ್ಷೇತ್ರದಲ್ಲಿ ನೀಡುತ್ತಿರುವ ಅಪಾರ ಸೇವೆಯನ್ನು ಪರಿಗಣಿಸಿ ಸನ್ಮಾನ ಮಾಡುತ್ತಿರುವುದು ತುಂಬಾ ಸಂತಸದ ವಿಚಾರ. ಶ್ರೀಯುತರು ಎನ್. ವಿ. ನಾಗೇಶ್ ಭಟ್ ಮತ್ತು ಪಣಿಯಮ್ಮ ಆಲ್ಮನೆ ಇವರ ಸುಪುತ್ರರು. ಆಲ್ಮನೆ ಶಾಲೆಯಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿರುತ್ತಾರೆ.

ಇವರಿಗೆ ಒಬ್ಬರು ಅಣ್ಣ. ಒಬ್ಬರು ಅಕ್ಕ. ಇಬ್ಬರು ತಮ್ಮಂದಿರು ಹಾಗೂ ಒಬ್ಬಳು ತಂಗಿ ಇದ್ದಾರೆ. ಆರ್ಥಿಕ ಸಮಸ್ಯೆಯಿಂದಾಗಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದರು. ನಮಗೆಲ್ಲಾ ತಿಳಿದಿರುವಂತೆ ಅಡಿಕೆ ಕೊನೆ ತೆಗೆಯುವುದು ತುಂಬಾ ಕಷ್ಟಕರವಾದ ಕೆಲಸ. ತಂದೆಯ ತುಂಬ ಕಷ್ಟಕರ ವೃತ್ತಿಯಾದ ಕೊನೆ ಕೆಲಸ ಮತ್ತು ಅಡಿಗೆ ವೃತ್ತಿಯಲ್ಲಿ ತಂದೆಯ ಜೊತೆಗೆ ಕೈ ಜೋಡಿಸಿದರು. ಸ್ವಲ್ಪ ಸಮಯದ ನಂತರದಲ್ಲಿ ತಾವೇ ಕಷ್ಟಪಟ್ಟು ಶ್ರಮವಹಿಸಿ ಸ್ವತಃ ಕೊನೆ ಕೆಲಸ ಮತ್ತು ಅಡಿಗೆ ವೃತ್ತಿಯನ್ನು ಮುಂದುವರೆಸಿದರು. ಇದರಲ್ಲಿ ಯಶಸ್ಸನ್ನೂ ಗಳಿಸಿದರು. ಸಾಕಷ್ಟು ಹೆಸರನ್ನೂ ಸಂಪಾದಿಸಿದರು. ಅಲ್ಲದೇ ಕೃಷಿ ಯಂತ್ರವಾದ ಟಿಲ್ಲರ್ ಚಾಲಕರಾಗಿ ಅನೇಕ ವರ್ಷಗಳಿಂದ ತಮ್ಮ ಕೆಲಸವನ್ನು ಬಹಳ ನಿಷ್ಠೆಯಿಂದ, ಸಂತೋಷದಿಂದ ಮಡಿಕೊಂಡು ಬರುತ್ತಿದ್ದಾರೆ.

ಈಗಲೂ ಸಹ ಉತ್ಸಾಹದಿಂದ ತಮ್ಮ ವೃತ್ತಿಕೆಲಸವನ್ನು ಮುಂದುವರೆಸಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಶ್ರೀಯುತರು ದಂಟಕ ಊರಿನ ಗೀತಾರನ್ನು ವಿವಾಹವಾಗಿ, ಸುಖೀ ಸಂಸಾರವನ್ನು ಸಾಗಿಸುತ್ತಿದ್ದಾರೆ. ಇವರಿಗೆ ಒಬ್ಬ ಪುತ್ರನಿದ್ದು, ಇಂಜಿನಿಯರಿಂಗ್ ವೃತ್ತಿಯನ್ನು ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಾಗಿದ್ದಾನೆ.

ಶ್ರೀ ದತ್ತಾತ್ರೇಯ ಭಟ್ಟರು ಶ್ರಮಪಟ್ಟು ಮಾಡುತ್ತಿರುವ ಈ ವೃತ್ತಿಯನ್ನು ಪರಿಗಣಿಸಿ, ಇವರನ್ನು ಈ ದಿನ ಶ್ರಮಿಕ ಕ್ಷೇತ್ರದಲ್ಲಿ ಸನ್ಮಾನಿಸಲಾಗುತ್ತಿದೆ. ಶ್ರೀ ಎನ್. ಎನ್. ದತ್ತಾತ್ರೇಯ ಭಟ್ ಮತ್ತು ಇವರ ಕುಟುಂಬವರ್ಗಕ್ಕೆ ಶ್ರೀ ಗಾಯತ್ರೀ ಮಾತೆಯು ಆಯುರಾರೋಗ್ಯ, ಸುಖ, ಸಂಪತ್ತು, ನೆಮ್ಮದಿಯನ್ನು ನೀಡಿ ಸನ್ಮಂಗಳವನ್ನುಂಟು ಮಾಡಲಿ ಎಂದು ಹಾರೈಸುತ್ತೇವೆ.

## ಬ್ರಾಹ್ಮಣ ಸಂಘ, ತೀರ್ಥಹಳ್ಳಿ ತಾಲ್ಲೂಕು ಪ್ರಸ್ತುತ ವರ್ಷ ವಿವಿಧ ಚುನಾವಣೆಗಳಲ್ಲಿ ವಿಜೇತರಾದ ವಿಪ್ರಬಂಧುಗಳಿಗೆ ಅಭಿನಂದನೆಗಳು.

1) **ಶ್ರೀ ಎ ಆರ್ ಪ್ರಸನ್ನಕುಮಾರ್,** ಇಂಜಿಯನಿಯರ್, ತೀರ್ಥಹಳ್ಳಿ

ನಿರ್ದೇಶಕರು, ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಕರ್ನಾಟಕರಾಜ್ಯಅಡಿಕೆ ಮಾರಾಟ ಸಹಕಾರ

ಸಂಘಗಳ ಮಹಾಮಂಡಳಿ, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ,

1) **ಶ್ರೀ ಹೆಚ್‌ಎಸ್ ಮಹೇಶ್ ಹುಲ್ಕುಳಿ** – ಉಪಾಧ್ಯಕ್ಷರು, ಶಿವಮೊಗ್ಗ ಮ್ಯಾಮ್ಕೋಸ್

2) **ಶ್ರೀಮತಿ ಜಯಶ್ರೀ ಕೋಟೇಶ್ವರ ಭಟ್ಟ** ಕಡಗೋಡು, ತೀರ್ಥಹಳ್ಳಿ

–ನಿರ್ದೇಶಕರು ಟಿ ಎ ಪಿ ಸಿ ಎಂ ಎಸ್, ತೀರ್ಥಹಳ್ಳಿ

1) **ಶ್ರೀ ಕೆ.ಎಸ್. ನಾರಾಯಣರಾವ್,** ಕಲ್ಲೋಣಿ

– ನಿರ್ದೇಶಕರು, ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷರು, ಪಿ.ಎ.ಸಿ.ಎಸ್. ಅಂಬುತೀರ್ಥ

2) **ಶ್ರೀ ಪಿ.ಎಸ್. ಮೋಹನ್‌ಕುಮಾರ್,** ವಿರೂಪಾಕ್ಷ – ನಿರ್ದೇಶಕರು, ಟಿ ಎ ಪಿ ಸಿ ಎಂ ಎಸ್, ತೀರ್ಥಹಳ್ಳಿ

3) **ಶ್ರೀಮತಿ ರೇವತಿಅನಂತಮೂರ್ತಿ,** ಬೈರಣ – ನಿರ್ದೇಶಕರು, ಟಿ ಎ ಪಿ ಸಿ ಎಂ ಎಸ್, ತೀರ್ಥಹಳ್ಳಿ

1) **ಶ್ರೀಮತಿ ಕೆ.ಎ. ಜ್ಯೋತಿ ಮೋಹನ್** – ಸದಸ್ಯರು, ಪಟ್ಟಣ ಪಂಚಾಯತ್, ತೀರ್ಥಹಳ್ಳಿ

Generated by Foxit PDF Creator © Foxit Software
http://www.foxitsoftware.com For evaluation only.



## ಗ್ರಾಮ ಪಂಚಾಯ್ತಿಗಳು, ತೀರ್ಥಹಳ್ಳಿ ತಾಲ್ಲೂಕು

1) **ಶ್ರೀಮತಿ ಚಂದ್ರಮತಿ ಟಿ ಎಂ,** ಅಂಬುತೀರ್ಥ – ಗ್ರಾ ಪಂ ಅಧ್ಯಕ್ಷರುನೊಣಬೂರು
2) **ಶ್ರೀಮತಿ ಸುಮಂಗಲ ನಾಗಭೂಷಣ್** ಬಾನುಗೋಡು–ಗ್ರಾ ಪಂ ಅಧ್ಯಕ್ಷರು, ಕುಡುಮಲ್ಲಿಗೆ
3) **ಶ್ರೀ ಸತ್ಯದೇವ ಬಾವಿಕೈಸರು** – ಗ್ರಾ ಪಂ ಅಧ್ಯಕ್ಷರುತ್ರ್ಯಯಂಬಕಪುರ
4) **ಶ್ರೀಮತಿ ರೇವತಿಗಣೇಶ್,** ಹಾರೇಕೊಪ್ಪ–ಗ್ರಾ ಪಂ ಸದಸ್ಯರು, ಆರಗ
5) **ಶ್ರೀಮತಿ ಆಶಾ ಸುಬ್ರಹ್ಮಣ್ಯ,** ಬೀಡೆ – ಗ್ರಾ ಪಂ ಸದಸ್ಯರು, ದೇಮ್ಲಾಪುರ
6) **ಶ್ರೀ ರವೀಂದ್ರ, ಅಕ್ಲಾಪುರ,** –ಗ್ರಾ ಪಂ ಸದಸ್ಯರು, ತ್ರ್ಯಯಂಬಕಪುರ,
ನಿರ್ದೇಶಕರು, ಪಿ.ಎ.ಸಿ.ಎಸ್. ದೇಮ್ಲಾಪುರ
7) **ಶ್ರೀಮತಿ ರಮಾರಾಘವೇಂದ್ರ,** ಲಕ್ಕುಡಿಗೆ, – ಗ್ರಾ ಪಂ ಸದಸ್ಯರು, ಬಸವಾನಿ
8) **ಶ್ರೀ ಶ್ರೀನಿಧಿ ಪಿ ಉಡುಪ,** ಕಲ್ಲೋಣಿ, – ಗ್ರಾ ಪಂ ಸದಸ್ಯರು, ಅರಳಸುರಳಿ
9) **ಶ್ರೀಮತಿ ವಾಣಿದೇವದಾಸ್,** ಕೋಗಿಲೆ – ಗ್ರಾ ಪಂ ಸದಸ್ಯರು, ಅರಳಸುರಳಿ

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ

1) **ಶ್ರೀ ನಾಗಭೂಷಣರಾವ್ ಕೆ ಹೆಚ್,** ಕುಂಬ್ರಿ, – ಅಧ್ಯಕ್ಷರು, ತೀರ್ಥಮುತ್ತೂರು
2) **ಶ್ರೀ ಅಶೋಕ್‌ಕುಮಾರ್‌ಎನ್‌ಎಸ್,** ನಗರವಳ್ಳಿ –ಅಧ್ಯಕ್ಷರು, ಹೇರಂಬಾಪುರ
3) **ಶ್ರೀ ಬಿ ಎಸ್ ನಾಗರಾಜ್,** ಬೀಡೆ, – ಉಪಾಧ್ಯಕ್ಷರು, ದೇಮ್ಲಾಪುರ
4) **ಶ್ರೀ ನಾಗರಾಜ್‌ಉಡುಪ,** ಇಂಬ್ರಗೋಡು, – ಉಪಾಧ್ಯಕ್ಷರು, ಯಡೇಹಳ್ಳಿ
5) **ಶ್ರೀ ಅಂಬಾ ಪ್ರಸಾದ್,** ಬುಕ್ಲಾಪುರ–ಉಪಾಧ್ಯಕ್ಷರು, ಕಸಬಾ
6) **ಶ್ರೀ ಎ.ವಿ. ನಾಗರಾಜ್ ಭಟ್ಟ,** ಬಸವಾನಿ – ನಿರ್ದೇಶಕರು, ಬಸವಾನಿ
7) **ಶ್ರೀ ಹೆಚ್‌ಎಸ್ ಬಾಲಸುಬ್ರಹ್ಮಣ್ಯ,** ಹಣಗೋಡು – ನಿರ್ದೇಶಕರು, ಅರಳಸುರಳಿ
8) **ಶ್ರೀ ಕೆ ಎಸ್‌ಕೊಲ್ಲೂರಯ್ಯ,** ಕಾರ್ಗಲ್, – ನಿರ್ದೇಶಕರು, ಕೋಣಂದೂರು
9) **ಶ್ರೀ ಗುರುರಾಜ್, ಹಾದಿಗಲ್ಲು** – ನಿರ್ದೇಶಕರು, ಕೋಣಂದೂರು
10) **ಶ್ರೀ ಪವನ್ ಜಿ ಎನ್,** ಗುಡ್ಡೇಕೊಪ್ಪ, – ನಿರ್ದೇಶಕರು, ಗುಡ್ಡೇಕೊಪ್ಪ
11) **ಶ್ರೀ ಸರ್ಜಾಕೈಲಾಸ್ ನಾಥ್,** ಕೋಟಿಕೊಪ್ಪ – ನಿರ್ದೇಶಕರು, ಗುಡ್ಡೇಕೊಪ್ಪ
12) **ಶ್ರೀ ರಮೇಶ್ ಜಿ, ಗುಂಡಿಗ,** – ನಿರ್ದೇಶಕರು, ಗುಡ್ಡೇಕೊಪ್ಪ
13) **ಶ್ರೀ ನಾಗಭೂಷಣ,** ಬಾನುಗೋಡು – ನಿರ್ದೇಶಕರು, ಯಡೇಹಳ್ಳಿ
14) **ಶ್ರೀಮತಿ ಶೈಲಶ್ರೀ, ಕ್ಯಾತನಕೆರೆ,** – ನಿರ್ದೇಶಕರು, ಯಡೇಹಳ್ಳಿ
15) **ಶ್ರೀ ಎಂ ಆರ್ ಸುದರ್ಶನ,** ಕೋಟೆಹಕ್ಲು – ನಿರ್ದೇಶಕರು, ಹೇರಂಬಾಪುರ
16) **ಶ್ರೀ ಎಂ ವೆಂಕಟರಾವ್, ಮರಡಿ,** – ನಿರ್ದೇಶಕರು, ಹೇರಂಬಾಪುರ
17) **ಶ್ರೀ ವೆಂಕಟೇಶ್ ಮೂರ್ತಿ ಕೆ ಜೆ** ಮಕ್ಕಿಮನೆ – ನಿರ್ದೇಶಕರು, ಹೇರಂಬಾಪುರ
18) **ಶ್ರೀಮತಿ ಅರುಣಕುಮಾರಿ,** ಕೋಟೆಹಕ್ಕಲು –ನಿರ್ದೇಶಕರು, ಹೇರಂಬಾಪುರ
19) **ಶ್ರೀ ವಿಠ್ಠಲ ಕೆ ಜಿ, ಕಮಕಾರು,** – ನಿರ್ದೇಶಕರು, ಕಸಬಾ, ತೀರ್ಥಹಳ್ಳಿ.
20) **ಶ್ರೀ ಕೆ ಜಿ ರಾಘವೇಂದ್ರ,** ಸಂತೆಕೊಪ್ಪ – ನಿರ್ದೇಶಕರು, ಹೆದ್ದೂರು

## ಕಾರ್ತೀಕ ದೀಪೋತ್ಸವ

ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಕಾರ್ತೀಕ ದೀಪೋತ್ಸವವನ್ನು ಪಟ್ಟಣ ಸಮಿತಿಗಳ ಒಕ್ಕೂಟದಿಂದ 24ನೇ ನವಂಬರ್ 2021ರಂದು ಶ್ರದ್ಧಾ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಸಂಜೆ ನಡೆದ ದೀಪೋತ್ಸವದಲ್ಲಿ ಸಮಾಜ ಬಾಂಧವರ ಜೊತೆ ಸಾರ್ವಜನಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

Generated by Foxit PDF Creator © Foxit Software
http://www.foxitsoftware.com For evaluation only.



**ಪವಿತ್ರ ಹಸು!** **ಸಂಗ್ರಹ : ಶ್ರೀ ನರಹರಿ ಭಟ್ಟ, ಸುಳುಗೋಡು**

"ಉರುಗ್ವೆ" ದೇಶದಲ್ಲಿ ಸರಾಸರಿ ಪ್ರತಿಯೊಬ್ಬ ವ್ಯಕ್ತಿಯು 4 ಹಸುಗಳನ್ನು ಹೊಂದಿದ್ದು, ಈ ದೇಶ ವಿಶ್ವದಾದ್ಯಂತ ಕೃಷಿಯಲ್ಲಿ ಮೊದಲ ಸ್ಥಾನದಲ್ಲಿದೆ. ಇದು ಕೇವಲ 33 ಲಕ್ಷ ಜನಸಂಖ್ಯೆಯ ದೇಶ, ಆದರೆ 1 ಕೋಟಿ 20 ಲಕ್ಷ ಗೋವುಗಳನ್ನು ಹೊಂದಿದೆ. ಪ್ರತಿ ಹಸುವಿನ ಕಿವಿಯ ಮೇಲೆ ಎಲೆಕ್ಟ್ರಾನಿಕ್ ಚಿಪ್ ಇರುತ್ತದೆ. ಇದು ಯಾವ ಹಸು ಎಲ್ಲಿದೆ ಎಂಬುದನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಅವರು ನೋಡುತ್ತಲೇ ಇರುತ್ತಾರೆ.

2005ರಲ್ಲಿ 33 ಲಕ್ಷ ಜನರಿದ್ದ ದೇಶ 90 ಲಕ್ಷ ಜನರಿಗೆ ಧಾನ್ಯಗಳನ್ನು ಉತ್ಪಾದಿಸುತ್ತಿತ್ತು ಮತ್ತು ಇಂದಿನ ದಿನದಲ್ಲಿ 2 ಕೋಟಿ 80 ಲಕ್ಷ ಜನರಿಗೆ ಧಾನ್ಯಗಳನ್ನು ಉತ್ಪಾದಿಸುತ್ತಿದೆ. "ಉರುಗ್ವೆ" ನ ಯಶಸ್ವಿ ಪ್ರದರ್ಶನದ ಹಿಂದೆ ದೇಶದ ರೈತರು ಮತ್ತು ಪ್ರಾಣಿ ಪೋಷಕರ ದಶಕಗಳ ಅಧ್ಯಯನವನ್ನು ಒಳಗೊಂಡಿರುತ್ತದೆ. ಇಡೀ ಕೃಷಿಯನ್ನು ನೋಡಲು 500 ಕೃಷಿ ಇಂಜಿನಿಯರ್‌ಗಳನ್ನು ನೇಮಿಸಲಾಗಿದೆ ಮತ್ತು ಈ ಜನರು ಡ್ರೋನ್ ಮತ್ತು ಉಪಗ್ರಹಗಳ ಮೂಲಕ ರೈತರ ಮೇಲೆ ನಿಗಾ ಇಡುತ್ತಾರೆ ಆದ್ದರಿಂದ ಅವರು ನಿರ್ಧರಿಸಿದ ಅದೇ ಕೃಷಿ ವಿಧಾನವನ್ನು ಅನುಸರಿಸುತ್ತಾರೆ. ಅಂದರೆ "ಹಾಲು, ಮೊಸರು, ತುಪ್ಪ, ಬೆಣ್ಣೆ" ಜನಸಂಖ್ಯೆಗಿಂತ ಹಲವು ಪಟ್ಟು ಹೆಚ್ಚು ಧಾನ್ಯ ಉತ್ಪಾದನೆಯೊಂದಿಗೆ "ಎಲ್ಲಾ ಧಾನ್ಯಗಳು, ಹಾಲು, ಮೊಸರು, ತುಪ್ಪ ಮತ್ತು ಬೆಣ್ಣೆಯನ್ನು ರಫ್ತು ಮಾಡಲಾಗುತ್ತದೆ ಮತ್ತು ಪ್ರತಿ ರೈತ ಲಕ್ಷಾಂತರ ಗಳಿಸುತ್ತಾನೆ. ಈ ದೇಶದ ರಾಷ್ಟ್ರೀಯ ಸಂಕೇತ ಸೂರ್ಯ ಮತ್ತು ಪ್ರಗತಿಯ ರಾಷ್ಟ್ರೀಯ ಸಂಕೇತ ಹಸು ಮತ್ತು ಕುದುರೆ. " ಉರುಗ್ವೆ ಗೋಹತ್ಯೆಯ ಮೇಲೆ ತಕ್ಷಣದ ಮರಣದಂಡನೆ ಕಾನೂನನ್ನು ಹೊಂದಿದೆ"

ಅತ್ಯಂತ ಮುಖ್ಯವಾದ ವಿಷಯವೆಂದರೆ ಈ ಹಸು ತಳಿ ಅಪ್ಪಟ ಭಾರತೀಯ. ದುಃಖದ ವಿಷಯವೆಂದರೆ ಭಾರತದಲ್ಲಿ ಗೋಹತ್ಯೆ ನಡೆಯುತ್ತದೆ ಮತ್ತು ಉರುಗ್ವೆಯಲ್ಲಿ ಗೋಹತ್ಯೆಗೆ ಮರಣದಂಡನೆ ವಿಧಿಸುವ ಅವಕಾಶವಿದೆ. ಈ ರೈತ ರಾಷ್ಟ್ರ ಉರುಗ್ವೆಯಿಂದ ನಾವು ಏನನ್ನಾದರೂ ಕಲಿಯಬಹುದೇ?
ಪ್ರಾಸಂಗಿಕವಾಗಿ ಲ್ಯಾಟಿನ್ ಅಮೆರಿಕಾದಲ್ಲಿ ಸಂರಕ್ಷಿಸಲ್ಪಟ್ಟಿರುವ ಪುಂಗನೂರು ತಳಿಯ ಹಸುಗಳನ್ನು ಬ್ರಾಹ್ಮಣ ತಳಿ ಎಂದು ಕರೆಯಲಾಗುತ್ತದೆ!??

## ವಿಪ್ರಭಾರತೀ ಆಜೀವ ಪೋಷಕರು :

1999ರಲ್ಲಿ ಪ್ರಾರಂಭಗೊಂಡ 'ವಿಪ್ರಭಾರತೀ' ತ್ರೈಮಾಸಿಕ ಪತ್ರಿಕೆ ನಿರಂತರವಾಗಿ ಪ್ರಕಟಣೆಗೊಳ್ಳುತ್ತ ತನ್ನ ಪ್ರಕಟಣೆಯ 22ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ. ವಿಪ್ರ ಭಾರತೀ ತಾಲೂಕಿನ ಎಲ್ಲ ವಿಪ್ರ ಕುಟುಂಬಗಳನ್ನೂ ಅದು ತಲುಪಬೇಕು, ಅದರ ಆರ್ಥಿಕ ನೆಲೆಗಟ್ಟು ಇನ್ನಷ್ಟು ಭದ್ರವಾಗಬೇಕು ಎಂಬುದು ನಮ್ಮ ಕನಸು. ವಿಪ್ರಬಾಂಧವರು **ರೂ1000-00 ಚಂದಾಹಣ ನೀಡಿ ಆಜೀವ ಪೋಷಕರಾಗಿ** ಅಭಿನಂದನಾರ್ಹರಾಗಿದ್ದಾರೆ.

ಹೆಚ್ಚಿನ ಮಾಹಿತಿಗೆ ಗಾಯತ್ರೀ ಮಂದಿರವನ್ನು ಅಥವಾ ಸಂಪಾದಕ ಮಂಡಲಿಯನ್ನು ಸಂಪರ್ಕಿಸಿ. 'ವಿಪ್ರಭಾರತೀ'ಯನ್ನು ಮುನ್ನಡೆಸಲು ನಮ್ಮೊಡನೆ ಕೈಜೋಡಿಸಬೇಕಾಗಿ ವಿನಂತಿ.

### ನೂತನ ಆಜೀವ ಪೋಷಕರು

**1) ಶ್ರೀ ಶಿವರಾಮ್, ಅವನಿ, ಸೊಪ್ಪುಗುಡ್ಡೆ, ತೀರ್ಥಹಳ್ಳಿ**
**2) ಶ್ರೀ ಎಸ್. ಆರ್. ವಿಶ್ವನಾಥ ಐಥಾಳ್, ಬಿ. ಅಗ್ರಹಾರ, ತೀರ್ಥಹಳ್ಳಿ**

Generated by Foxit PDF Creator © Foxit Software
http://www.foxitsoftware.com For evaluation only.



# ವೇದೋಪನಿಷತ್ತುಗಳಿಗೊಂದು ಪ್ರಸ್ತಾವನೆ

ವಿದ್ವಾನ್ ಯು ಪದ್ಮನಾಭ ಭಟ್ಟ, ದಬ್ಬೆಕಟ್ಟೆ

## ಓಂಕಾರ

'ಅ' ಎಂಬ ಋಗ್ವೇದ, 'ಉ' ಎಂಬ ಯಜುರ್ವೇದ, 'ಮ್' ಎಂಬ ಸಾಮವೇದಗಳ ಒಟ್ಟು ಮೊತ್ತವೇ 'ಓಂ' ಎಂಬ ಈ ಸತ್ಯ ಜಗತ್ತು. ಇದೇ ಮಿಥುನ ಸ್ವರೂಪಿಯಾದ ವಾಯು ಎಂಬ ಪ್ರಜಾಪತಿ ಬ್ರಹ್ಮ. 'ನಮಸ್ತೆ ವಾಯೋ, ತ್ವಮೇವ ಪ್ರತ್ಯಕ್ಷಂ ಬ್ರಹ್ಮ 'ವದಿಷ್ಯಾಮಿ' ಎಂದು ವೈದಿಕ ಸಂಹಿತಾ ಋಷಿಗಳು ಇಡೀ ಜಗತ್ತಿಗೇ ನಮಸ್ಕರಿಸಿದರು. ಏಕೆಂದರೆ ಈ ಜಗತ್ತೇ ಪ್ರತ್ಯಕ್ಷ ರೂಪದ ಪರಬ್ರಹ್ಮವಾಗಿದೆ. ಇದೇ ಏಕೈಕ ಆತ್ಮ ತತ್ತ್ವ.

ಶುಕ್ರ ಸ್ಫೋಟದ ಮೂಲಕ ಸೃಷ್ಟಿಯಾದ ಅಹಸ್ಸೆಂಬ ಸ್ತ್ರೀ ವಿಭಾಗವೇ ಸದ್ವಸ್ತು. ಅದರ ಕಣಗಳ ವಿಭಜನೆ–ಸಂಯೋಜನೆಗಳಿಂದ ಸೃಷ್ಟಿಯಾದ ಸಮಸ್ತ ಶಕ್ತಿ, ಶಬ್ದ, ಬೆಳಕು, ಘನ, ದ್ರವ, ಅನಿಲ ವಸ್ತುಗಳೆಂಬ ವಿವಿಧ ದೇವತೆಗಳನ್ನು ಋಗ್ವೈದಿಕ ಮಂತ್ರ ಋಷಿಗಳು ಸಾಕ್ಷಾತ್ಕರಿಸಿಕೊಂಡು ಹಾಡಿದರು. ಇದು 'ಅ' ಎಂಬ ಮಾತ್ರೆ. ಈ ಎಲ್ಲ ದೇವತೆಗಳ ವಿವಿಧ ಚಟುವಟಿಕೆಗಳೆಂಬ ಯಜ್ಞಗಳನ್ನು ಯಜುರ್ವೈದಿಕ ಮಂತ್ರ ಋಷಿಗಳು ಸಾಕ್ಷಾತ್ಕಾರ ಮಾಡಿಕೊಂಡು ಮಂತ್ರಗಳ ಮೂಲಕ ವ್ಯಕ್ತಗೊಳಿಸಿದರು. ಇದು 'ಉ' ಎಂಬ ಮಾತ್ರೆ. ಈ ಎಲ್ಲ ವಸ್ತುಗಳ ಕಣಗಳಲ್ಲೂ ಪುರುಷ ವಿಭಾಗವಾಗಿ ಬೆರೆತು ಅವುಗಳ ಅಸ್ತಿತ್ವಕ್ಕೆ ಕಾರಣವಾದ ಅಕ್ಷರ ಪರಬ್ರಹ್ಮವೆಂಬ ಉದ್ಗೀಥ ಮಹಾಕಂಪನವನ್ನು ಸಾಕ್ಷಾತ್ಕರಿಸಿಕೊಂಡು ಸಾಮ ವೈದಿಕ ಮಂತ್ರ ಋಷಿಗಳು, ಸಾಮಗಾನವನ್ನು ಹಾಡಿದರು. ಇದು 'ಮ್' ಎಂಬ ಮಾತ್ರೆ. ಹೀಗೆ ಅ–ಉ–ಮ್ ಎಂಬ ಈ ಮೂರು ಮಾತ್ರೆಗಳಿಂದ ಕೂಡಿದ ಓಂಕಾರವೇ ಈ ಜಗತ್ತು. ಇದನ್ನು 'ಪ್ರಣವ' ಎನ್ನುತ್ತಾರೆ. ಇದರೊಂದಿಗೆ ಬೆರೆತ ಉದ್ದೀಥ ಕಂಪನವೇ ಅಕ್ಷರಬ್ರಹ್ಮ, ಪ್ರಣವ ಮತ್ತು ಅಕ್ಷರಗಳೆರಡೂ ಸೇರಿದ ಮಿಥುನ ಸ್ವರೂಪದ ಜಗತ್ತನ್ನೇ ಅಕ್ಷರಬ್ರಹ್ಮ ಈ ಜ್ಞಾನವನ್ನು ಸಾಧಿಸಿದ ಅಥರ್ವಮಂತ್ರ ಋಷಿಗಳನ್ನೆಲ್ಲ 'ಅಂಗಿರಾ' ಎಂಬ ಒಂದೇ ಪದದಿಂದ ಸೂಚಿಸುತ್ತಾರೆ. ಅಂಗಿರ ಎಂದರೆ ಪ್ರಜಾಪತಿ ಬ್ರಹ್ಮ . ಜಗತ್ತಿನ ವಿವಿಧ ದೇವಾಸುರರೆಲ್ಲವೂ ಅವನ ಅಂಗಗಳೇ ಆಗಿರುವುದರಿಂದ ಅವನು 'ಅಂಗಿ' ಎನಿಸಿದ್ದಾನೆ. ದೇವಾಸುರರ ಎಲ್ಲ ಯಜ್ಞಗಳನ್ನೂ ಆಟ ಎಂಬಂತೆ ನೋಡಿ ರಮಿಸಿಕೊಂಡಿರುವುದರಿಂದ 'ರಾ' ಆಗಿದ್ದಾನೆ. ಎರಡೂ ಸೇರಿ 'ಅಂಗಿರಾ' – ಇವನೇ ಬ್ರಹ್ಮ.

**ವೇದ ಮಂತ್ರಗಳ ಗಿಳಿಪಾಠ**

ಋತಜ್ಞಾನದ ಆವೇಶದಿಂದ ಮಂತ್ರ ಋಷಿಗಳು ಉದ್ಗರಿಸಿದ ಸೂಕ್ತಗಳನ್ನು 'ಸಂಹಿತೆ'ಗಳು ಎನ್ನುತ್ತಾರೆ. ಈ ಸಂಹಿತಾ ಮಂತ್ರಗಳೆಲ್ಲ ಋತವೇ ಆಗಿವೆ. ಅವುಗಳನ್ನು ಶಿಷ್ಯ ಪರಂಪರೆ ಕಂಠಪಾಠ ಮಾಡಿ ಉಳಿಸಿಕೊಂಡು ಬಂದರು. ಅವರಲ್ಲಿ ಎಷ್ಟೋ ಜನರಿಗೆ ಋತದ ಸಾಕ್ಷಾತ್ಕಾರದ ಮಾತು ಹಾಗಿರಲಿ ಅದರ ಕಲ್ಪನೆಯೂ ಅರಿಯದು. ಅಲ್ಲಲ್ಲಿ ಋತದ ಕುರಿತಾಗಿ ಮಂತ್ರ ಋಷಿಗಳು ಸಲ್ಲಿಸಿದ ಪ್ರಾರ್ಥನೆಗಳು, ಮಾಡಿದ ವರ್ಣನೆಗಳು – ಮುಂತಾದುವು ಮಾತ್ರ ಸ್ವಲ್ಪ ಮಟ್ಟಿಗೆ ಅರ್ಥವಾಗುವಂತಿವೆ. ಅದನ್ನೇ ವೇದಗಳ ಆಶಯ ಎಂದು ನಂಬಿದರು. ಅರ್ಥವಾಗದ ಇತರ ಋತಜ್ಞಾನ ಸೂಕ್ತಗಳಿಗೆ ತಮಗೆ ತೋಚಿದ ಅರ್ಥ ಮಾಡಿದರು. ಆದರೂ ಎಲ್ಲ ಸಂಹಿತಾ ಮಂತ್ರಗಳನ್ನು ಮಾತ್ರ ಪರಂಪರಾಗತವಾಗಿ ಸ್ವಲ್ಪವೂ ಲೋಪವಾಗದಂತೆ ಉಳಿಸಿಕೊಂಡು ಬಂದರು.

ಹೀಗೆ ಅರ್ಥವಾಗದಿರುವುದಕ್ಕೆ ಕಾರಣವಿದೆ. ಸಂಹಿತಾಮಂತ್ರಗಳಲ್ಲಿ, ಋತದ ಸಾಕ್ಷಾತ್ಕಾರವಿಲ್ಲದೆ ಅರ್ಥ ಮಾಡಲು ಸಾಧ್ಯವಿಲ್ಲದ ಎಷ್ಟೋ ಮಂತ್ರಗಳಿವೆ. ಕೆಲವು ಅಸಾಧು ಎನಿಸುತ್ತವೆ. ಮತ್ತೆ ಕೆಲವು ನಿಗೂಢ ಎನಿಸುತ್ತವೆ. ಅವುಗಳಿಗೆ ತಮಗೆ ಬೇಕಾದಂತೆ ಅರ್ಥ ಮಾಡಬಹುದಾಗಿದೆ. ಇನ್ನು ಕೆಲವಂತೂ ಹೇಯ ಅನಿಸುತ್ತವೆ.

ಉದಾಹರಣೆಗಾಗಿ ಇಂದ್ರನ ಪ್ರತಾಪವನ್ನು ಹೊಗಳುವ ಮಂತ್ರವೊಂದು ಋಗ್ವೇದದಲ್ಲಿದೆ–

**ಕಸ್ತೇ ಮಾತರಂ ವಿಧವಾಮಚಕ್ರ–**

Generated by Foxit PDF Creator © Foxit Software
http://www.foxitsoftware.com For evaluation only.



**ಚ್ಛಯಂ ಕಸ್ತಾಮಜಿಘಾಂಸಚ್ಚರಂತಂ ।**
**ಕಸ್ತೇ ದವೋ ಅಧಿ ಮಾರ್ಡೀಕ ಆಸೀ–**
**ದ್ಯತ್ ಪ್ರಾಕ್ಷಿಣಾಃ ಪಿತರಂ ಪಾದ ಗೃಹ್ಯ ॥**
**(ಋ. ೩. ೧೮. ೧೨)**

"ಹೇ ಇಂದ್ರವೇ, ಯಾವಾಗ ನೀನು ನಿನ್ನ ತಂದೆಯ ಪಾದವನ್ನು ಹಿಡದು ಆಚೆಗೆಸೆದೆಯೋ ಆಗ ನಿನ್ನ ತಾಯಿ ವಿಧವೆಯಾದಳು. ನೀನು ಮಲಗಿದಾಗ ಮತ್ತು ಸಂಚರಿಸುತ್ತಿರುವಾಗ ನಿನ್ನನ್ನು ಕೊಲ್ಲಲು ಪ್ರಯತ್ನಿಸಿದವರಾರು ? ಸಾಹಸ ಕಾರ್ಯಗಳಲ್ಲಿ ನಿನ್ನನ್ನು ಮೀರಿಸುವ ಬೇರೆ ಯಾವ ದೇವನಿದ್ದಾನೆ?" ಏನಿದರ ಅರ್ಥ ? ನಾಲ್ಕು ಸಂಹಿತೆಗಳಲ್ಲಿ ಇಂದ್ರನಿಗೆ ಕೊಟ್ಟಷ್ಟು ಪ್ರಾಶಸ್ತ್ಯ ಬೇರೆ ಯಾವ ದೇವತೆಗಳಿಗೂ ಕೊಡಲಾಗಿಲ್ಲ. ಇಂಥ ಪಿತೃಹಂತಕನ್ನು ನಾವು ಪ್ರಾಶಸ್ತ್ಯ ಕೊಟ್ಟು ಗೌರವಿಸಬೇಕೆ? ಇಂದ್ರನ ಈ ಕೆಲಸ ಅಸಾಧ್ಯ ಎನಿಸುವುದಿಲ್ಲವೆ? ಋತಜ್ಞಾನವಿಲ್ಲದೆ ಈ ಮಂತ್ರದ ಆಶಯ ಅರ್ಥವಾಗುವುದಿಲ್ಲ.

**ಚತ್ವಾರಿ ಶೃಂಗಾ ತ್ರಯೋ ಅಸ್ಯಪಾದಾ**
**ದ್ವೇ ಶೀರ್ಷೇ ಸಪ್ತ ಹಸ್ತಾಸೋ ಅಸ್ಯ ।**
**ತ್ರಿಧಾ ಬದ್ಧೋ ವೃಷಭೋ ರೋರವೀತಿ**
**ಮಹಾದೇವೋ ಮರ್ತ್ಯಾಂ ಆವಿವೇಶ ॥**
**(ಋ ೪–೫೮–೩)**

"ಈ ಗೂಳಿಗೆ ನಾಲ್ಕು ಕೊಂಬುಗಳು ಇದಕ್ಕೆ ಮೂರು ಪಾದಗಳು. ಎರಡು ತಲೆ, ಏಳು ಕೈಗಳು, ಮೂರು ಕಡೆಗಳಿಂದ ಕಟ್ಟಲ್ಪಟ್ಟಿದೆ. ಇಂಥ ಗೂಳಿಯು ಗರ್ಜಿಸುತ್ತಿದೆ. ಮಹಾದೇವನೇ ಈ ಮರ್ತ್ಯಲೋಕಕ್ಕೆ ಇಳಿದು ಬಂದಿದ್ದಾನೆ" – ಇದು ನಿಗೂಢವಲ್ಲವೆ? ಬೇಕಾದ ಹಾಗೆ ಈ ಮಂತ್ರಪ್ರತಿಮೆಯನ್ನು ಅರ್ಥ ಮಾಡಬಹುದಲ್ಲವೆ?

**ದ್ಯೌರ್ಮೇ ಪಿತಾ ಜನಿತಾ ನಾಭಿರತ್ರ**
**ಬಂಧುರ್ಮೇ ಮಾತಾ ಪೃಥಿವೀ ಮಹೀಯಂ ।**
**ಉತ್ತಾನಯೋಶ್ಚಮ್ವೋ (ಓ) ಇ ಯೋರ್ನಿರಂತ–**
**ರತ್ರಾ ಪಿತ್ರಾ ದುಹಿತುರ್ಗರ್ಭಮಾಧಾತ್ ॥**
**(ಋ ೨–೩–೩೩)**

"ದ್ಯುಲೋಕವೇ ನನಗೆ ಜನ್ಮಕೊಟ್ಟ ತಂದೆ. ನಾಭಿ ಎನಿಸುವ ಅಂತರಿಕ್ಷವೇ ನನ್ನ ಬಂಧು. ಶ್ರೇಷ್ಠವಾದ ಜನನಾಂಗಗಳುಳ್ಳ ಈ ಭೂಮಿಯೇ ನನ್ನ ತಾಯಿ. ಅಲ್ಲಿ ತಂದೆಯಿಂದ ಮಗಳಿಗೆ ಗರ್ಭಧಾರಣೆಯಾಯಿತು" – ತಂದೆ ಮಗಳ ಸಂಬಂಧವನ್ನು ಇಲ್ಲಿ ಹೇಳುವಾಗಿ ಚಿತ್ರಿಸಿದೆಯಲ್ಲವೇ? ಏಕೆ ಹೀಗೆ? ಋತದ ಆವೇಶದಲ್ಲಿ ಹೊರಟ ಮಂತ್ರಗಳ ಋತೋದ್ಗಾರಗಳಿಗೆ ಋತದ ಸಾಕ್ಷಾತ್ಕಾರವಿಲ್ಲದವರು ವ್ಯಾಖ್ಯಾನಿಸಲಾರರು. ಆದರೆ ಉಪನಿಷತ್ತುಗಳ ಸಮಗ್ರ ಪ್ರಜ್ಞೆಗೆ ಇದರ ಸತ್ಯ ಭಾಸವಾಗುತ್ತದೆ. ಇವೆಲ್ಲ ಮಂತ್ರಗಳಲ್ಲಿ ಮನುಷ್ಯ ಲೋಕದಿಂದಾಚೆಗಿನ ಜಗತ್ತಿನ ಶುದ್ಧ ವೈಜ್ಞಾನಿಕ ತತ್ವಗಳ ನಿರೂಪಣೆಯಿದೆ.

ಆದರೆ ಋತದ ಸಾಕ್ಷಾತ್ಕಾರವಿಲ್ಲದ ವ್ಯಾಖ್ಯಾನಕಾರರಿಂದ ವೇದ ಮಂತ್ರಗಳ ಅಪಾರ್ಥ ನಿರಂತರ ನಡೆಯುತ್ತಲೇ ಬಂತು. ವೇದಗಳ ಆಶಯವನ್ನೇ ಮುಚ್ಚಿ ಹಾಕುವಂತೆ ಋತವನ್ನರಿಯದ ಇತರ ಋಷಿಗಳಿಂದ ಕ್ರಮೇಣ ಇತರ ಗ್ರಂಥಗಳ ಸೃಷ್ಟಿಯಾಯಿತು. ಈಗಾಗಲೇ ಗಾರ್ಹಪತ್ಯಾಗ್ನಿಯ ಉಪಸನೆಯನ್ನು ನಡೆಸುತ್ತಿರುವ ಅವರು ಉಪಾಸನೆಗೆ ಸಾಮೂಹಿಕ, ಸಾಂಸ್ಕೃತಿಕ ಸ್ವರೂಪವನ್ನು ಕೊಟ್ಟು ಯಾಗ, ಯಜ್ಞ, ಹೋಮ, ಹವನಗಳ ಕರ್ಮಾಂಗಗಳಿಗೆ ಬುನಾದಿಯನ್ನು ಹಾಕಿದರು. ಇದಕ್ಕಾಗಿ ಪ್ರತಿ ವೇದಕ್ಕೂ ವಿವಿಧ ಬ್ರಾಹ್ಮಣ ಗ್ರಂಥಗಳನ್ನು ಸೃಷ್ಟಿಸಿದರು. ಐತರೇಯ ಬ್ರಾಹ್ಮಣ, ಕೌಶೀತಕಿ ಬ್ರಾಹ್ಮಣ, ತಾಂಡ್ಯ ಬ್ರಾಹ್ಮಣ, ಶತಪಥ ಬ್ರಾಹ್ಮಣ, ಷಡ್ವಿಂಶ ಬ್ರಾಹ್ಮಣ, ಗೋಪಥ ಬ್ರಾಹ್ಮಣ ಮುಂತಾದ ಅನೇಕ ಬ್ರಾಹ್ಮಣ ಗ್ರಂಥಗಳಿವೆ. ಅವುಗಳಲ್ಲಿ ನಾನಾ ಬಗೆಯ ಯಜ್ಞಯಾಗಗಳು, ಅವುಗಳನ್ನು ಮಾಡುವ ವಿಧಿ ವಿಧಾನಗಳು, ದ್ರವ್ಯಗಳು, ಋತ್ವಿಜರು ಅವುಗಳನ್ನು ಮಾಡುವಾಗ ಬಳಸುವ ನಾಲ್ಕೂ ವೇದಗಳ ಸಂಹಿತಾ ಮಂತ್ರಗಳ ವಿನಿಯೋಗ ಕ್ರಮ –ಮುಂತಾದವುಗಳ ವಿವರಗಳಿದ್ದು ಯಾಜ್ಞಿಕ ಸಂಸ್ಕೃತಿಯು ವೈದಿಕರಲ್ಲಿ ವ್ಯಾಪಕವಾಗಿ ಬೇರು ಬಿಡುವಂತಾಯಿತು. ಇದರಿಂದಾಗಿ ಸಮಾಜಕ್ಕೆ ಸಾಮೂಹಿಕವಾಗಿ ಸಾಂಸ್ಕೃತಿಕವಾಗಿ ಎಷ್ಟೇ ಪ್ರಯೋಜನವಾಗಿರಲಿ, ಆದರೆ ಈ ಬ್ರಾಹ್ಮಣ ಗ್ರಂಥಗಳ ಋಷಿಗಳಾರೂ ವೇದ ವಿದಗ್ಧರೇ ಆಗಿದ್ದರೂ ಋತವನ್ನರಿಯದ ಲೌಕಿಕರು ಎಂಬುದಂತೂ ಸರ್ವ

Generated by Foxit PDF Creator © Foxit Software
http://www.foxitsoftware.com For evaluation only.



ವಿದಿತ. ಕರ್ಮಕಾಂಡದ ಆಚರಣೆಗಾಗಿಯೇ ವೇದ ಸಂಹಿತೆಗಳಿವೆ ಎಂಬ ಇವರ ಧೋರಣೆಯಿಂದ ವೇದಗಳ ನಿಜವಾದ ಆಶಯವೇ ಕಣ್ಮರೆಯಾಯಿತು. ಇವರಿಂದಾಗಿ ಉಂಟಾದ ಒಂದೇ ಒಂದು ಪ್ರಯೋಜನವೆಂದರೆ ಈ ಮೂಲಕವಾಗಿಯಾದರೂ ಸಂಹಿತಾ ಮಂತ್ರಗಳು ಇಂದಿನ ವರಗೂ ಸ್ವಲ್ಪವೂ ಮುಕ್ಕಾಗದೆ ಉಳಿದು ಬಂದಿವೆ.

ವೇದಗಳ ಆಶಯ ಈ ರೀತಿ ಕೆಡುತ್ತಿರುವುದನ್ನು ಮನಗಂಡ ಉಪನಿಷತ್ ಋಷಿಗಳು, ವೇದ ಸಂಹಿತೆಗಳ ನಿಜವಾದ ಆಶಯವನ್ನು ಸ್ಪಷ್ಟಗೊಳಿಸುವಂತೆ ಉಪನಿಷತ್ತುಗಳನ್ನು ರಚಿಸಿದರು. ಅವುಗಳನ್ನು ಆಯಾ ವೇದಗಳ ಅಂತ್ಯದಲ್ಲಿ ಸೇರಿಸಿದರು. ಅವುಗಳನ್ನು 'ವೇದಾಂತ' ಎನ್ನುತ್ತಾರೆ. ಈ ಋಷಿಗಳೆಲ್ಲ ಋತದ ಸಾಕ್ಷಾತ್ಕಾರ ಹೊಂದಿದ ಜೀವನ್ಮುಕ್ತರಾಗಿದ್ದ ಕಾರಣ ಇಂಥ ಉಪನಿಷತ್ತುಗಳು ಸಂಹಿತೆಗಳ ಪಾಲಿಗೆ ಪ್ರಾಮಾಣಿಕವಾಗಿವೆ. ವೇದಗಳ ಸಾರವನ್ನೇ ಇವು ತಿಳಿಸಿ ಕೊಡುತ್ತವೆ.

ಋಗ್ವೇದದ ಐತರೇಯ ಉಪನಿಷತ್, ಯಜುರ್ವೇದದ ಬೃಹದಾರಣ್ಯಕ, ಈಶ, ತೈತ್ತಿರೀಯ, ಕಠೋಪನಿಷತ್ತುಗಳು, ಸಾಮವೇದದಕೇನ, ಛಾಂದೋಗ್ಯ ಉಪನಿಷತ್ತುಗಳು, ಅಥರ್ವ ವೇದದ ಪ್ರಶ್ನ ಮಾಂಡ್ಯೂಕ್ಯ, ಮುಂಡಕೋಪನಿಷತ್‌ಗಳು ಈ ಹತ್ತು ಉಪನಿಷತ್ತುಗಳ ನಾಲ್ಕೂ ವೇದಗಳ ಆಶಯವನ್ನು ತಿಳಿಸಿಕೊಡುವ ಪ್ರಾಮಾಣಿಕ ಉಪನಿಷತ್ತುಗಳಾಗಿವೆ. ಇವು ಸಂಹಿತಾ ಮಂತ್ರಗಳನ್ನು ಸ್ಪಷ್ಟಗೊಳಿಸುವ ವ್ಯಾಖ್ಯಾನಗಳಿದ್ದಂತೆ. ಈ ಮಧ್ಯೆ ಭಗವಾನ್ ಕೃಷ್ಣದ್ವೈಪಾಯರಿಂದ ಒಂದು ಮಹತ್ಕಾರ್ಯ ನಡೆಯಿತು.

ಹಿಂದೆ ವೇದ ಸಂಹಿತೆಗಳೆಲ್ಲ ಒಂದೇ ಗುಂಪಿನಲ್ಲಿ ಚೆದುರಿ ಹೋಗಿತ್ತು. 'ಅ' ಜಗತ್ತಿನ ದೇವಾಸುರರ ವಸ್ತುನಿಷ್ಠ ಜ್ಞಾನವನ್ನು ನೀಡುತ್ತಿರುವ ಋಗ್ವೈದಿಕ ಮಂತ್ರಗಳು 'ಉ' ಜಗತ್ತಿನ ಕ್ರಿಯಾಶೀಲತೆ ಎಂಬ ಯಜ್ಞಗಳನ್ನು ನಿರೂಪಿಸುವ ಯಜ್ಞರ್ವೈದಿಕ ಸಂಹಿತೆಗಳು, 'ಮ್' ಜಗತ್ತಿನ ಅಸ್ತಿತ್ವಕ್ಕೆ ಕಾರಣವಾಗುತ್ತಿರುವ ಸಾಮಗಾನದ ಸಾಮ ವೈದಿಕ ಸಂಹಿತೆಗಳು 'ಅಂಗಿರಾ' – ಬದುಕಿನ ಜಂಜಾಟದ ನಡುವೆಯೂ ಬ್ರಹ್ಮನಿಷ್ಠರಾಗಿಯೇ ಪ್ರಶಾಂತವಾಗಿ ಬದುಕುವ ಕಲೆಯನ್ನು ತಿಳಿಸಿಕೊಡುತ್ತಿರುವ ಅಥರ್ವ ವೈದಿಕ ಮಂತ್ರಗಳು–ಇವನ್ನೆಲ್ಲ ಸಂಗ್ರಹಿಸಿ ಅಭ್ಯಸಿಸಿ, ಸಂಪಾದಿಸಿ, ವರ್ಗೀಕರಿಸಿ ನಾಲ್ಕು ವೇದಗಳನ್ನಾಗಿ ವಿಂಗಡಿಸಿಕೊಟ್ಟವರು ಮಹರ್ಷಿ ಕೃಷ್ಣ ದ್ವೈಪಾಯನರು 'ವ್ಯಾಸ' ಎಂದರೆ ವಿಭಾಗಿಸಿದವ ಎಂದರ್ಥ. ಕಲಸು ಮೇಲೋಗರವಾಗಿ ಬೆರೆತಿದ್ದ ಸಂಹಿತಾಮಂತ್ರಗಳನ್ನೆಲ್ಲ ವಿಂಗಡಿಸಿ ವಿಭಾಗ ಮಾಡಿಕೊಟ್ಟುದರಿಂದ ಅವರನ್ನು ವೇದವ್ಯಾಸ ಎಂದೇ ಕರೆದು ಗೌರವಿಸಿದರು.

ಆದರೆ ಅಷ್ಟಕ್ಕಾಗಲೇ ವೇದ ಸಂಹಿತೆಗಳ ಮಂತ್ರರ್ಥಗಳನ್ನು ದಾರಿ ತಪ್ಪಿಸುವ ಕೆಲಸ ಸಾಕಷ್ಟು ನಡೆದು ಬಿಟ್ಟಿವೆ. ಪ್ರತಿ ವೇದಕ್ಕೂ ವಿವಿಧ ಬ್ರಾಹ್ಮಣಗ್ರಂಥಗಳು, ಆರಣ್ಯಕಗಳು ವೇದಗಳ ಅಂಗಗಳೆಂದು ಮನ್ನಣೆ ಪಡೆದ ಶಿಕ್ಷಾ, ಕಲ್ಪ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಗ್ರಂಥಗಳು, ವಿವಿಧ ವಿದ್ವಾಂಸರಿಂದ ವೇದಭ್ಯಾಸಗಳು, ಹೊಸ ಹೊಸ ಯೋಗ ಪದ್ಧತಿಗಳು, ವ್ಯಾಖ್ಯಾನಗಳು – ಎಲ್ಲವೂ ಅಂದಿನಿಂದ ಇಂದಿನ ವರೆಗೂ ಸೃಷ್ಟಿಯಾಗುತ್ತಲೇ ಬಂತು. ಎಲ್ಲವನ್ನೂ ವೈದಿಕ ಸಾಹಿತ್ಯವೆಂದೇ ಗೌರವಿಸುತ್ತೇವೆ.

ಅಲ್ಲದೇ ಅನೇಕ ಪುರಾಣಗಳ ಕಾಲ್ಪನಿಕ ಕಾದಂಬರಿಗಳನ್ನು ಬರೆದು ಅವೆಲ್ಲವೂ 'ವ್ಯಾಸಕೃತ' ಎಂದು ಹಣೆಪಟ್ಟಿ ಹಚ್ಚಿದರು. ನೀರಿಳಿಯದ ಗಂಟಲಿನಲ್ಲಿ ಕಡುಬು ತುರುಕಿದಂತೆ, ಮೊದಲೇ ಅರ್ಥವಾಗದ ವೇದ ವೇದಾಂತಗಳಿಗೆ ಇನ್ನಷ್ಟು ನಿಗೂಢ'ವಾಗುವಂತೆ ಬ್ರಹ್ಮಸೂತ್ರಗಳು ಬಾದರಾಯಣರ ಹೆಸರಿನಲ್ಲಿ ಸೃಷ್ಟಿಯಾಯಿತು. ಅದನ್ನಂತೂ ತಮಗೆ ಬೇಕಾದಂತೆ ಅರ್ಥ ಮಾಡಿಕೊಂಡು ಸಂಹಿತಾ ಮಂತ್ರಗಳ ಆಶಯವನ್ನೇ ಕಡೆಗಣಿಸಲು ಸುಲಭವಾಯಿತು.

ವಿವಿಧ ಕಾಲಗಳ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಮನುಸ್ಮೃತಿ, ಯಜ್ಞವಲ್ಕ್ಯಸ್ಮೃತಿ, ಪರಾಶರಸ್ಮೃತಿ, ಭಗವದ್ಗೀತೆ ಮುಂತಾದ ಸ್ಮೃತಿ ಗ್ರಂಥಗಳು ಸೃಷ್ಟಿಯಾದವು. ರಾಮಾಯಣ ಮಹಾಭಾರತ ಭಾಗವತಗಳು ರಚನೆಯಾದುವು. ಎಲ್ಲವನ್ನೂ ವೈದಿಕ ಸಾಹಿತ್ಯವೆಂದೇ ಗೌರವಿಸಿದರು.

Generated by Foxit PDF Creator © Foxit Software
http://www.foxitsoftware.com For evaluation only.



ಭಾರತೀಯರ ನರನಾಡಿಗಳಲ್ಲಿ ಇವೆಲ್ಲದರ ಸಂಸ್ಕಾರಗಳು ಪ್ರವಹಿಸತೊಡಗಿತು. ಇವೆಲ್ಲ ಆಯಾ ಗ್ರಂಥಕರ್ತರ ಅಭಿಮತವೇ ವಿನಾ ವೇದೋಪನಿಷತ್ತುಗಳ ನಿಜವಾದ ಆಶಯ ಇದಾವುದೂ ಅಲ್ಲ. ಬಹುಪಾಲು ವೈದಿಕರು ವೇದ ಸಂಹಿತಾ ಮಂತ್ರಗಳ ಗಿಳಿಪಾಠವನ್ನು ಶ್ರದ್ಧೆಯಿಂದ ಮಾಡಿದರೇ ವಿನಾ ಅವುಗಳ ನಿಜವಾದ ಆಶಯವನ್ನು ಅರ್ಥ ಮಾಡಿಕೊಳ್ಳುವ ಗೊಡವೆಗೇ ಹೋಗಲಿಲ್ಲ.

ವೇದ ಸಂಹಿತೆಗಳಿಗೆ ಉಪನಿಷತ್ತುಗಳ ಮಾತ್ರ ಪ್ರಮಾಣ. ಉಪನಿಷತ್ತುಗಲಿಗೆ ವೇದ ಸಂಹಿತೆಗಳು ಮಾತ್ರ ಪ್ರಮಾಣ. ಇವುಗಳಲ್ಲಿ ಯಾವುದೇ ಕಡೆ ಸಂಶಯ ಬಂದರೆ ಇನ್ನೊಂದು ಕಡೆ ಅದಕ್ಕೆ ಪರಿಹಾರ ಸಿಗುತ್ತದೆ. ಒಟ್ಟಿನಲ್ಲಿ ವೇದೋಪನಿಷತ್ತುಗಳು ಶುದ್ಧ ವಿಜ್ಞಾನವೇ ಹೊರತು ಯಾವುದೇ ಮತಗ್ರಂಥವಲ್ಲ. ಅದೇ ಋತಜ್ಞಾನ.

– ಮುಂದುವರೆಯುವುದು

## ಭಗವದ್ಗೀತಾ ಅಭಿಯಾನ

**"ಲೋಕಾ ಸಮಸ್ತಾಃ ಸುಖಿನೋ ಭವಂತು"** ಎಂಬ ಮಹದಾಶಯದೊಂದಿಗೆ ಶ್ರೀ ಸೋಂದಾ ಸ್ವರ್ಣವಲ್ಲಿ ಸಂಸ್ಥಾನದ ನಿರ್ದೇಶನ ಮತ್ತು ಮಾರ್ಗದರ್ಶನದೊಂದಿಗೆ ಕಳೆದ ಹಲವು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಗೀತಾ ಜಯಂತಿ ಕಾರ್ಯಕ್ರಮವು ನಮ್ಮ ನಿರೀಕ್ಷೆಯಂತೆ ಪ್ರಸ್ತುತ ವರ್ಷವೂ ಡಿಸೆಂಬರ್ 7ನೆಯ ತಾರೀಕಿನಿಂದ 13ರವರೆಗೆ ಪ್ರತಿನಿತ್ಯ ಭಗವದ್ಗೀತೆಯ 100 ಶ್ಲೋಕಗಳ ಪಠಣ ಮತ್ತು 14ನೆ ತಾರೀಕಿನಂದು ಭಗವದ್ಗೀತೆಯ ಎಲ್ಲ 18 ಅಧ್ಯಾಯಗಳ ಪಠಣ ಮಾಡಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸುಮಾರು 75 ಮಂದಿ ಮಹಿಳೆಯರು ಕೃತಾರ್ಥರಾದರು. ಮುಳಬಾಗಲು – ದೂರ್ವಾಸಪುರದ 25 ಮಹಿಳೆಯರು ಶ್ರೀಮತಿ ಕೆ. ಸಿ. ಇಂದಿರಾ ಹೆಬ್ಬಾರ್ ಮತ್ತು ಶ್ರೀಮತಿ ಸುಮಂಗಲಾ ಸದಾಶಿವ ಭಟ್ಟರು ಭೀಮನಕಟ್ಟೆ ಇವರ ನೇತ್ರತ್ವದಲ್ಲಿ ಎರಡು ತಂಡಗಳು ಗೀತಾ ಪಠಣವನ್ನು ಮಾಡಿ ಗೀತಾ ಜಯಂತಿಯಂದು ಒಟ್ಟಾಗಿ ಜಯಂತಿ ಆಚರಣೆಯನ್ನು ಮಾಡಿ ಯಶಸ್ವಿಯಾದರು. ತೀರ್ಥಹಳ್ಳಿ ಪಟ್ಟಣ ವ್ಯಾಪ್ತಿಯ ಸೊಪ್ಪುಗುಡ್ಡೆಯಲ್ಲಿ ಶ್ರೀಮತಿ ಲಲಿತಮ್ಮ ಅವರ ನೇತ್ರತ್ವದಲ್ಲಿ 10 ಮಹಿಳೆಯರು ಮತ್ತು ಕುಶಾವತಿಯಲ್ಲಿ ಶ್ರೀಮತಿ ಜಯಶ್ರೀ ಕಡಗೋಡು ಅವರ ನೆತ್ರತ್ವದಲ್ಲಿ ಕಡಗೋಡು ಕಾಂಪೌಂಡಿನ ಶ್ರೀ ಗಣಪತಿ ದೇವಸ್ಥಾನದಲ್ಲಿ 10 ಮಹಿಳೆಯರು ಪಾಲ್ಗೊಂಡ ಅಭಿಯಾನ ಯಶಸ್ವಿಯಾಯ್ತು.

ಹೆಗ್ಗಡೆಕೊಪ್ಪದ ಸಂಘಟನಾ ಸಮಿತಿಯ ವ್ಯಾಪ್ತಿಯ ಸುಮಾರು 30 ಮಹಿಳೆಯರು ಶ್ರೀಮತಿ ವಾಣಿ ಸುಬ್ಬರಾವ್ ಅವರ ಮುಂದಾಳತ್ವದಲ್ಲಿ ಚಿಟ್ಟೆಬೈಲಿನ ಪ್ರಜ್ಞಾಭಾರತಿ ಶಾಲೆಯಲ್ಲಿ ಭಗವದ್ಗೀತೆಯ ಎಲ್ಲ 18 ಅಧ್ಯಾಯಗಳ ಪಠಣಮಾಡಿ ಗೀತಾ ಜಯಂತಿಯನ್ನು ಯಶಸ್ವಿಯಾಗಿ ಆಚರಿಸಿದರು.

ಭಗವದ್ಗೀತಾ ಅಭಿಯಾನದಲ್ಲಿ ಪಾಲ್ಗೊಂಡವರೆಲ್ಲರಿಗೂ ಅಭಿನಂದನೆಗಳು – ಶುಭಾಶಯಗಳು.

## ಮಕ್ಕಳ ದಿನಾಚರಣೆ, ಕಾರ್ತಿಕ ದೀಪೋತ್ಸವ, ಪಟ್ಟಣ ಸಮಿತಿ –4 – ಬಾಳೆಬೈಲು

ದಿನಾಂಕ : 14–12–2021ರ ಭಾನುವಾರ ಮಕ್ಕಳ ದಿನಾಚರಣೆಯ ಪ್ರಯುಕ್ತ ನಮ್ಮ ಸಂಘಟನಾ ಸಮಿತಿಯ ವತಿಯಿಂದ ಎಲ್.ಕೆ.ಜಿ. ಯಿಂದ 7ನೇ ತರಗತಿಯವರೆಗಿನ ಮಕ್ಕಳಿಗಾಗಿ ವಿವಿಧ ಆಟೋಟ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಸುಮಾರು 35ಕ್ಕೂ ಹೆಚ್ಚು ಮಕ್ಕಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಇದೇ ದಿನ ಸಂಜೆ ಬಾಳೇಬೈಲಿನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕಾರ್ತೀಕ ದೀಪೋತ್ಸವವನ್ನು ಆಚರಿಸಲಾಯಿತು. ಸ್ಥಳೀಯರೆಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂತೋಷಿಸಿದರು.

**ಪಟ್ಟಣ ಸಮಿತಿ –4 – ಬಾಳೆಬೈಲು** ದಿನಾಂಕ : 17–12–2021ರ ಶುಕ್ರವಾರ ನಮ್ಮ ಸಂಘಟನಾ ಸಮಿತಿಯ ವತಿಯಿಂದ ಮೇಲಿನಕುರುವಳ್ಳಿ ಅಂಬೇಡ್ಕರ್ ವಸತಿ ಶಾಲೆಯ ಹೆಣ್ಣುಮಕ್ಕಳಿಗಾಗಿ "ಹದಿಹರೆಯದ ಸವಾಲುಗಳು" ಎಂಬ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆಪ್ತ ಸಮಾಲೋಚಕಿ ಮತ್ತು ಬ್ರಾಹ್ಮಣ ಸಂಘದ ನಿರ್ದೇಶಕಿಯಾದ ಶ್ರೀಮತಿ ವಿನುತಾಮುರಳೀಧರ್ ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ವಿದ್ಯಾರ್ಥಿನಿಯರ ಹದಿಹರಯದ ಸಮಯದಲ್ಲಾಗುವ ದೈಹಿಕ ಮಾನಸಿಕ ಸಮಸ್ಯೆಗಳು ಅದನ್ನು ಹೇಗೆ ಪರಿಹಾರ ಮಾಡಿಕೊಳ್ಳಬಹುದು ಎಂಬುದನ್ನು ಸವಿಸ್ತಾರವಾಗಿ ವಿವರಿಸಿದರು.

ಈ ಕಾರ್ಯಕ್ರಮವನ್ನು ನಮ್ಮ ಸಮಿತಿಯ ಸದಸ್ಯೆ ಶ್ರೀಮತಿ ಚಂದ್ರಿಕಾ ಪ್ರವೀಣ್ ಇವರು ನಿರ್ವಹಿಸಿದರು. ಸಂಚಾಲಕಿ ಶ್ರೀಮತಿ ಅನಿತಾ ಅನುರಾಗ್ ಮತ್ತು ಸದಸ್ಯೆ ಶ್ರೀಮತಿ ರೇಖಾ ದತ್ತಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 250ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಈ ಕಾರ್ಯಾಗಾರದ ಉಪಯೋಗ ಪಡೆದುಕೊಂಡರು. ಶಾಲೆಯ ಮುಖ್ಯೋಪಾಧ್ಯಾಯಿನಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

Generated by Foxit PDF Creator © Foxit Software
http://www.foxitsoftware.com For evaluation only.



# ದೈವ ಪ್ರೀತಿ– ಪಾಪಭೀತಿ– ಸಂಘನೀತಿ

ಶ್ರೀ ಎಂ. ಎಸ್. ರಮೇಶ್, ತೀರ್ಥಹಳ್ಳಿ

ಮೌಲ್ಯಾಧಾರಿತ ಬದುಕಿಗೆ ದೈವಪ್ರೀತಿ– ಪಾಪಭೀತಿ– ಸಂಘನೀತಿ ಎಂಬ ಮೂರು ಕಟ್ಟಲೆಗಳು ಅತಿ ಮುಖ್ಯ. ಭಗವಾನ್ ಬಾಬಾರವರು ಈ ಮೂರು ಮಹಾಮಂತ್ರವನ್ನು ಬದುಕಿನುದ್ದಕ್ಕೂ ಆಚರಣೆಗೆ ತರುವಂತೆ ಆದೇಶಿಸಿದರು. ಇಂದು ನಾವು ನಮ್ಮ ಸಮಾಜದತ್ತ ಕಣ್ಣು ಹಾಯಿಸಿದಾಗ ನಮಗೆ ಕಾಣಸಿಗುವುದು ದೈವ ಪ್ರೀತಿಯ ಬದಲು ದೈವಭೀತಿ. ಪಾಪಭೀತಿಯ ಬದಲು ಪಾಪ ಪ್ರೀತಿ, ಇದು ಏಕೆ ಹೀಗಾಯ್ತು ಎನ್ನುವುದರ ಕಡೆಗೆ ಗಮನ ಹರಿಸಿದಾಗ ನಮ್ಮಲ್ಲಿರದ ಆಧ್ಯಾತ್ಮಿಕ ಶಿಸ್ತಿನ ಬದುಕು ಹಾಗೂ ಭಗವದ್ಭಕ್ತಿಯ ನೈಜತೆಯ ಕೊರತೆಗಳೇ ಕಾರಣವೆಂಬುದು ಸ್ಪಷ್ಟವಾಗುತ್ತದೆ. ಭಗವದ್ ಭಕ್ತಿ ಎನ್ನುವುದೇ ದೈವ ಪ್ರೀತಿ. ಭಕ್ತಿ ಎನ್ನುವುದು ನಮ್ಮ ಅರ್ಪಣೆಯಲ್ಲಿ ಮಾತ್ರವಿರದೆ ನಮ್ಮ ತ್ಯಾಗದ ಮಹತ್ವವನ್ನು ಹೊಂದಿಕೊಂಡಿರುತ್ತದೆ. ಭಗವಂತನಿಗಾಗಿ ನಮ್ಮೆಲ್ಲ ದುರ್ಗುಣಗಳನ್ನು ತ್ಯಾಗ ಮಾಡಿದಾಗ ನಾವೊಬ್ಬ ಸದ್ಭಕ್ತ ಎನಿಸಿಕೊಳ್ಳಲು ಸಾಧ್ಯ. ಇದಕ್ಕೆ ಬೇಕಾಗಿರುವುದು ನಮ್ಮ ಆಧ್ಯಾತ್ಮಿಕ ಚಿಂತನೆ ಮತ್ತು ಭಗವಂತ ಮತ್ತು ಭಗವದ್ ಕಾರ್ಯಗಳ ಬಗೆಗಿನ ನೈಜ ಅರಿವು. ನಾವು ಅನೇಕ ಬಾರಿ ಹೇಳುವುದುಂಟು ಹಾಗೆ ಮಾಡಿದರೆ ದೇವರು ಕಷ್ಟ ಕೊಡುತ್ತಾನೆ ಹೀಗೆ ಮಾಡಿದರೆ ದೇವರು ನಮಗೆ ಪಾಪ ಕೊಡುತ್ತಾನೆ ಎಂದೆಲ್ಲ. ನಮ್ಮ ಪಾಪ ಪುಣ್ಯಗಳೆರಡಕ್ಕೂ ದೇವರು ಭಾಗಿಯಾಗಲಾರ ನಮ್ಮ ಈ ಎಲ್ಲ ನಡವಳಿಕೆಗಳಿಗೆ ನಾವೇ ಹೊಣೆಗಾರರಾಗಿರುತ್ತೇವೆ. ಆತನ ಪ್ರೀತಿಗಳಿಸುವುದೆಂದರೆ ಆತನಿಗೆ ಒಪ್ಪುವಂತೆ ಬದುಕುವುದೊಂದೇ ದಾರಿ. **'ಪುನರಪಿ ಮರಣಂ ಪುನರಪಿ ಜನನಂ'** ಎಂಬ ಕ್ರಿಯೆಗೆ ನಮ್ಮ ಪಾಪ ಪುಣ್ಯಗಳೇ ಹೊಣೆಯಾಗಿರುತ್ತವೆ. ದೈವ ಪ್ರೀತಿ ಏಕೆ ಬೇಕು ಅಂದರೆ ಬದುಕಿನ ಬಂಧ ವಿಮೋಚನೆಗಾಗಿ.

ಪಾಪಭೀತಿ ಎನ್ನುವುದು ಬದುಕನ್ನು ರೂಪಿಸುವ ಅತ್ಯಂತ ವಿಸ್ತಾರವಾದ ಒಂದು ಸಿದ್ಧಾಂತ. ನಾವು ಅನೇಕ ಬಾರಿ ಪಾಪ ಎನ್ನುವ ಕಲ್ಪನೆಯಿಂದಲೇ ಹೊರಗಿರುತ್ತೇವೆ. ನಾವು ಮಾಡಿದ ಯಾವ ಕಾರ್ಯವನ್ನೂ ಈ ಒರೆಗಲ್ಲಿಗೆ ಹಚ್ಚಿ ಸತ್ಯಾಂಶ ಅರಿತುಕೊಳ್ಳಲು ಸಿದ್ಧರಾಗಿರುವುದಿಲ್ಲ. ನಮ್ಮ ದೈನಂದಿನ ವ್ಯವಹಾರದಲ್ಲಿ ಒಂದು ಸಣ್ಣ ಮಾತಿದೆ. ಯಾರ ಯಾವ ವರ್ತನೆಯು ನಮಗೆ ಹಿಂಸೆ ಅನ್ನಿಸುವುದೋ ಅದನ್ನು ನಾವು ಇತರರ ಮೇಲೆ ಹೇರದಿರುವುದೇ ಪಾಪ ಎಂದು. ಇಲ್ಲಿಯೇ ನಾವು ತಪ್ಪುತ್ತಿರುವುದು ನನ್ನ ಮೂಗಿನ ನೇರಕ್ಕೆ ನಾನು ಮಾಡುತ್ತಿರುವುದೆಲ್ಲ ಸರಿ ಎನ್ನುವ ವಾದದಲ್ಲಿಯೇ ನಾವು ಕಾಲವನ್ನು ನೂಕುತ್ತಿರುತ್ತೇವೆ. ಸರಿ ತಪ್ಪುಗಳ ಗ್ರಹಿಕೆ ನಮಗೇಕೆ ಬೇಕು. ಇಂದಿನ ಇರುವಿಕೆಯನ್ನು ನಮ್ಮಿಷ್ಟದಂತೆ ಮಜವಾಗಿ ಅನುಭವಿಸೋಣ ಎನ್ನುವಷ್ಟರಲ್ಲಿಯೇ ನಾವಿರುತ್ತೇವೆ ಹೊರತು ಭವಿಷ್ಯದ ನಮ್ಮ ಅನಿಶ್ಚತೆ, ನಮ್ಮೊಡನೆ ನಾವು ಹೊರುವ ಪಾಪ ಪುಣ್ಯಗಳ ಲೆಕ್ಕಾಚಾರಗಳಿಗೆ ಸ್ವಲ್ಪವೂ ಅವಕಾಶ ಇರುವುದೇ ಇಲ್ಲ. ಈ ಬದುಕು ಆಧ್ಯಾತ್ಮಿಕತೆಯನ್ನು ಬೆಳೆಸಿಕೊಂಡರೆ ಮಲಿನತೆಯಿಂದ ಹೊರಹೊಮ್ಮಿ ಏಳಿಗೆಯ ಪಥದಲ್ಲಿ ಮುನ್ನಡೆಯನ್ನು ಸಾಧಿಸಲು ಸಾಧ್ಯವಾದೀತು ಇನ್ನೂ ಸ್ಪಷ್ಟವಾಗಿ ಹೇಳಬಹುದಾದರೆ ಪಾಪ ಕೃತ್ಯ ಎನ್ನುವುದು ಬೆಂಕಿಯಿದ್ದ ಹಾಗೆ. ಅದು ತನ್ನನ್ನು ಮುಟ್ಟಿದ ಕೂಡಲೆ ಸುಡದಿರಲೂ ಬಹುದು. ಆದರೆ ನಿಧಾನವಾಗಿ ಮೌಲ್ಯಾಧಾರಿತ ಬದುಕನ್ನು ಸುಡುತ್ತಲೇ ಇರುತ್ತದೆ. ಇದಕ್ಕೆಂದೇ ಬಾಬಾರವರು ಹೇಳಿದರು. ಪುಣ್ಯ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಾಗದಿದ್ದರೂ ಅಥವಾ ಇಷ್ಟವಿಲ್ಲದಿದ್ದರೂ ಪಾಪ ಕಾರ್ಯಗಳ ಬಗೆಗೆ ಮಾತ್ರ ಮನಸ್ಸಿನಿಂದಲೂ ಯೋಚಿಸಬೇಡಿ. ಮಾಡಲೂ ಬೇಡಿ ಎಂದು. ಪವಿತ್ರ ಕುರಾನ್ ಗ್ರಂಥದ ಒಂದು ನುಡಿಯೂ ಹೀಗೆ ಇದೆ. ನಿಮ್ಮ ಆಂತರ್ಯ ಒಪ್ಪದಿರುವುದನ್ನು ಮಾಡುವುದೇ ಪಾಪ. ಅಂದಮೇಲೆ ದೈವ ಪ್ರೀತಿ ಪಾಪಭೀತಿ ಈ ಎರಡೇ ಸಾಲದು ಬದುಕಿಗೆ. ಅಲ್ಲಿ ಸಂಘನೀತಿ ಎನ್ನುವುದೊಂದಿದೆ.

ಸಂಘನೀತಿ ಎಂದರೇನು? ಈ ಮಾನವ ಸಮಾಜದಲ್ಲಿ ನಮ್ಮ ಅಸ್ತಿತ್ವವೇನೋ ಗೋಚರವಾಗಿದೆ. ಇದು ನಮಗೆ ಬೇಕೋ ಬೇಡವೋ, ಇದು ನಮ್ಮ ಉದ್ಧಾರಕ್ಕೋ ಅಲ್ಲವೊ, ಇಲ್ಲಿ ನಾವು ಅನಿಶ್ಚಿತ ಎಲ್ಲವೂ ಕ್ಷಣಿಕ ಎಂಬುವುದನ್ನಂತೂ ಒಪ್ಪಲೇಬೇಕು ಅದು ಹೇಗೆಯೇ ಇರಲಿ ಸಮಾಜಕ್ಕೆ ನಾನೊಂದು ಹೊರೆಯಾಗಿ ಪರಿಣಮಿಸಬಾರದು ಅಲ್ಲವೆ. ಅದಕ್ಕೆಂದೆ ಬದುಕಿನಲ್ಲಿ ಸಂಘನೀತಿ ಎನ್ನುವುದೊಂದರ ಅವಶ್ಯಕತೆ. ಬದುಕಿನ ಸಮರ್ಪಕವಾದ ನಿರ್ವಹಣೆ. ಇತರರೊಂದಿಗೆ ಒಂದಾಗಿ ಬಾಳುವ ರೀತಿ–ನೀತಿ ಇದುವೇ ಸಂಘನೀತಿಯ ಮುಖ್ಯ ತಿರುಳು. ತಾನು ಯಾರು? ತನ್ನ ಅಸ್ತಿತ್ವವೇನು? ತಾನು ಹೇಗಿರಬೇಕು? ಮುಂದಿನ

Generated by Foxit PDF Creator © Foxit Software
http://www.foxitsoftware.com For evaluation only.



ತನ್ನ ಪಯಣ ಎಲ್ಲಿಗೆ ಎಂಬುವುದರ ಬಗೆಗಿನ ಅರಿವೇ ಬದುಕನ್ನು ಸಮರ್ಪಕವಾಗಿ ರೂಪಿಸಬಲ್ಲುದು. ಹಿಂದೆ ಅರಿಯದ ಮುಂದೆ ಗೊತ್ತಿರದ ನಡುವಿನ ಈ ಬಾಳರಥದಲ್ಲಿ ತನ್ನ ಜವಾಬ್ದಾರಿ, ತನ್ನ ಬದುಕಿನ ರೀತಿಗಳನ್ನು ನಿರ್ಣಯಿಸಿಕೊಳ್ಳುವುದೇ ಸಂಘನೀತಿ.

ಮಾನವ ಎಂದ ಕೂಡಲೆ ಅವನ ಬದುಕು ಎರಡು ಮುಖ್ಯವಾದ ಹಂತಗಳಲ್ಲಿ ರೂಪುಗೊಳ್ಳಬೇಕು. ಒಂದು ಮಾನವ ಮಾನವನಾಗಿ ಬದುಕುವ ರೀತಿ ಎರಡು ಮಾನವ ಮಾಧವನಾಗಿ ರೂಪುಗೊಳ್ಳುವ ನೀತಿ. ಅನೇಕರ ಬದುಕಿನ ರೀತಿಯನ್ನೂ ಕಂಡ ನಾವು ಹೇಳುವುದುಂಟು ದೇವರಂತಹ ಮನುಷ್ಯ ಎಂದು. ಇದು ನಮ್ಮಿಂದ ಸಾಧ್ಯವಾಗುವುದು ಜೀವನವೆಂಬುದು ಪರಮಾತ್ಮ ನಮಗೆ ನೀಡಿರುವ ಸಿರಿ. ಸಮಾಜದ ಋಣವ ತೀರಿಸುವ ಸೇವೆಯಿಂದ ಇದು ಪರಿಪೂರ್ಣ. ಮಾನವ ಬದುಕಿನ ಲೆಕ್ಕಾಚಾರ ಹೀಗಿದೆ. ದೈವ ಪ್ರೀತಿ+ಪಾಪಭೀತಿ = ಸಂಘನೀತಿ ಈ ಎರಡರ ಸಮರ್ಪಕವಾದ ಅಂಶಗಳ ಕೂಡುವಿಕೆಯು ಸಂಘ ನೀತಿ ಸರಿಹೊಂದುತ್ತದೆ. ಈ ಮೂರೂ ಕಟ್ಟುಪಾಡುಗಳೊಂದಿಗೆ ನಾವೂ ನಮ್ಮ ಬದುಕನ್ನು ಮೌಲ್ಯಾಧಾರಿತವಾಗಿಸಿಕೊಳ್ಳೋಣ. ಸಾರ್ಥಕ ಬದುಕಿಗೆ ಇರುವುದು ಇದೊಂದೇ ನೈಜಮಾರ್ಗ.

**ಶ್ರದ್ಧಾಂಜಲಿ :**

ನಮಗೆ ಲಭ್ಯವಾದ ಮಾಹಿತಿಯ ಪ್ರಕಾರ ನಮ್ಮ ತಾಲೂಕಿನ ಈ ಕೆಳಗಿನ ಮಹನೀಯರು ಅಕ್ಟೋಬರ್ ನಿಂದ ಡಿಸೆಂಬರ್ ವರೆಗಿನ ಅವಧಿಯಲ್ಲಿ ದೈವಾಧೀನರಾಗಿರುತ್ತಾರೆ. ಅವರೆಲ್ಲರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು, ಸದ್ಗತಿಯನ್ನು ಕರುಣಿಸಲಿ ಅವರ ಕುಟುಂಬಸ್ಥರು, ಆತ್ಮೀಯರಿಗೆಲ್ಲ ಅವರ ಅಗಲುವಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಸಂಘದ ಕಾರ್ಯಕಾರೀ ಸಮಿತಿಯ ಸಭೆಗಳಲ್ಲಿ ಪ್ರಾರ್ಥಿಸಿ ಗೌರವ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸಿ ಪತ್ರ ಕಳುಹಿಸಲಾಗಿದೆ.

1) **ಶ್ರೀಮತಿ ಸುವರ್ಣಮ್ಮ,** ಶಿಲಕರಡಿ, ಕಮ್ಮರಡಿ
2) **ಶ್ರೀಮತಿ ಸಾವಿತ್ರಮ್ಮ,** ಭೂತರಾಯನಕಟ್ಟೆ, ತೀರ್ಥಹಳ್ಳಿ
3) **ಶ್ರೀ ಸತೀಶ್** ಬಿನ್ ಶಾಮ ಐಥಾಳ್, ರಥಬೀದಿ, ತೀರ್ಥಹಳ್ಳಿ
4) **ಶ್ರೀ ವೆಂಕಟರಾಮಯ್ಯ,** ಬೀಡೆ, ದೇಮ್ಲಾಪುರ
5) **ಶ್ರೀಮತಿ ಸರಸ್ವತಮ್ಮ,** ಕಳ್ಳೀಗದ್ದೆ, ಕನ್ನಂಗಿ
6) **ಶ್ರೀ ಸುವಿನ್,** ಕಳ್ಳೀಗದ್ದೆ, ಕನ್ನಂಗಿ
7) **ಶ್ರೀ ಗೋವಿಂದರಾಜ್,** ಅರಳಾಪುರ
8) **ಶ್ರೀ ನಂದನ್,** ಬಿನ್ ನರಸಿಂಹ ಕಡಗೋಡು ಕಾಂಪೌಂಡ್, ತೀರ್ಥಹಳ್ಳಿ
9) **ಶ್ರೀ ನಾಗಭೂಷಣ,** ಬಾಗೋಡು
10) **ಶ್ರೀ ರಾಘವೇಂದ್ರ ಜೋಯ್ಸ್,** ಗಣಪತಿಕಟ್ಟೆ, ಕಟ್ಟೆಹಕ್ಲು
11) **ಶ್ರೀಮತಿ ವೀಣಾ ದಿನೇಶ್,** ಹಸಲಕೊಡಿಗೆ
12) **ಶ್ರೀ ರಾಮಮೂರ್ತಿ ಐಥಾಳ್,** ಮೇಗರವಳ್ಳಿ
13) **ಶ್ರೀ ಎಲ್. ವಿ. ಕೃಷ್ಣಮೂರ್ತಿ,** ಲಕ್ಕಿಬೀಳು
14) **ಶ್ರೀ ವಾಸುದೇವ ಐಥಾಳ್,** ನಗರವಳ್ಳಿ
15) **ಶ್ರೀ ನಾರಾಯಣ ಹೊಳ್ಳರು,** ಕುರುವಳ್ಳಿ

**ಕೋರಿಕೆ :** ವಿಪ್ರ ಬಾಂಧವರು ದೈವಧೀನರಾದವರ ಹೆಸರು ಊರು, ಅಂಚೆ, ಫೋನ್ ನಂಬರ್, ದೈವಾಧೀನ ದಿನಾಂಕ ಮತ್ತು ಕುಟುಂಬದ ಒಬ್ಬರ ವಿಳಾಸವನ್ನು ತಿಳಿಸಿದರೆ ಸಂಘದಿಂದ ಶ್ರದ್ಧಾಂಜಲಿ ಪತ್ರವನ್ನು ಕಳಿಸಲಿಕ್ಕೆ ಅನುಕೂಲವಾಗುತ್ತದೆ.

Generated by Foxit PDF Creator © Foxit Software
http://www.foxitsoftware.com For evaluation only.



## ಜಂಕ್ ಫುಡ್

ಸುಮಾರುಜನ ತಂದೆ ತಾಯಿಯರು ತಮ್ಮ ಮಕ್ಕಳ ಬಗ್ಗೆ ಯಾವಾಗಲೂ ಅವರು ಸುಸ್ತು, ನಿಶಕ್ತಿ, ಆಲಸ್ಯ. ಆಸಕ್ತಿನೇ ಇಲ್ಲ, ಸೋಮಾರಿತನದಿಂದ, ನಿದ್ರೆ ಮಾಡ್ತಾ ಇರುತ್ತಾರೆ. ಹೇಳಿದ ಮಾತು ಕೇಳೋದಿಲ್ಲ ಎದುರು ಮಾತನಾಡುತ್ತಾರೆ, ಓದೋದು ಕಡಿಮೆ ಮಾತು ಜಾಸ್ತಿ. ಅಪ್ಪ ಅಮ್ಮನ ಜೊತೆ ಕೂತು ಊಟ ಮಾಡೋದಿಲ್ಲ. ಮನೆಯಿಂದ ಟಿಫಿನ್ ಬಾಕ್ಸ್ ಡಬ್ಬಿಯನ್ನು ಸ್ಕೂಲ್ ಕಾಲೇಜಿಗೆ ತೆಗೆದುಕೊಂಡು ಹೋಗೋದಿಲ್ಲ ಫ್ರೆಂಡ್ಸ್ ಜೊತೆಗೆ ತಿನ್ತೀನಿ ಅಂಥ ಹೇಳುವುದು ಮನೆಗೆ ಲೇಟಾಗಿ ಬರುವುದು ಹೊರಗಡೆ ಸಿಗುವಂಥ ಪದಾರ್ಥಗಳನ್ನು ಬೇಕು ಅಂಥ ಹೇಳುವುದು, ಮನೆಗೆ ಲೇಟಾಗಿ ಬರುವುದು, ಹೊರಗಡೆ ಸಿಗುವಂತ ಪದಾರ್ಥಗಳನ್ನು ಬೇಕು ಅಂತ ಹೇಳ್ತಾರೆ.

ಮನೆ ಫುಡ್ ಬೋರ್ ಬೋರ್ ಟೇಸ್ಟಿ ಫಾಸ್ಟ್ ಫುಡ್‌ಗಳೇ ಬೇಕು ಪ್ಯಾಕ್ಡ್ ಐಟಮ್‌ಗಳೇ ಬೇಕು.

ಹಣ್ಣು ತರಕಾರಿ ಅಂತು ಬೇಡವೇ ಬೇಡ ಸ್ಕೂಲ್ ಇಂದ ಫೋನ್ ಬರೋ ಅಂತದ್ದು ನಿಮ್ಮ ಮಗಳು ಅಥವಾ ಮಗ ತಲೆ ಸುತ್ತಿ ಬಿದ್ದಿದ್ದಾರೆ ಅಂಥ. ಪಿಂಪಲ್, ಮೊಡವೆ, ಚರ್ಮದ ತೊಂದರೆ ಇರಬಹುದು. ಹೇರ್‌ಫಾಲ್ ಮುಟ್ಟಿನ ಸಮಸ್ಯೆ ಇನ್ನೂ ಮದುವೆ ಆದವರದಲ್ಲಿ ಮಕ್ಕಳು ಆಗದೇ ಇರೋದು ಬಂಜೆತನ ಲೈಂಗಿಕ ಸಮಸ್ಯೆ,, ಇದೆಲ್ಲ ಯಾಕೆ ಆಗುತ್ತಾ ಇದೆ? ಮನಸ್ಸಿಗೆ ಒಂದು ಕಿರಿಕಿರಿ ಅವಾಗಾವಾಗ ತಲೆ ನೋವು ಜೀರ್ಣಕ್ರಿಯೆಯಲ್ಲಿ ಸಮಸ್ಯೆ ಗ್ಯಾಸ್ಟ್ರಿಕ್ ಸಮಸ್ಯೆ ನಾಲಿಗೆ ರುಚಿ ಜಂಕ್ ಫುಡ್ ತಿನ್ನೋದ್ರಿಂದ

**ಜಂಕ್ ಅಂದ್ರೆ ಏನು ?**

ಕುರುಕಲು ಕರೆದಿರುವ ಪದಾರ್ಥ, ಕಸಕಡ್ಡಿ ಕಚಡಾ ಪದಾರ್ಥಗಳು ಈ ಜಂಕ್ ತಿನ್ನೋದ್ರಿಂದ ಎಲ್ಲರ ಆರೋಗ್ಯದ ಪರಿಸ್ಥಿತಿ ಹದಗೆಡುತ್ತಾ ಇದೆ. ಮನೆಯಿಂದ ಹೊರಗೆ ಕಾಲಿಟ್ಟ ಕೂಡಲೇ ಬೀದಿ ಬೀದಿಯಲ್ಲಿ ಜಂಕ್ ಕುರುಕಲ್ಲದೇ ಕಾರುಬಾರು. ಇದೇ ಒಂದು ಫ್ಯಾಷನ್ ಆಗಿ ಹೋಗಿದೆ. ಮನೆಬಾಗಿಲ ವರೆಗೂ ಕೂಡ ಈ ಜಂಕ್ ಬರ್ತಾ ಇದೆ. ಹಿರಿಯರಾಗ್ಲಿ, ಕಿರಿಯರಾಗ್ಲಿ ಈ ಜಂಕ್ ಮೇಲೆ ಒಂದು ಆಸೆ, ಮೋಹ, ತಿಂದೇ ಹೋದೆ, ಏನೋ ಒಂದು ರೀತಿ ಸಂಕಟ ಮನಸ್ಸಿಗೆ ಒಂದು ದುಃಖ ಮಧ್ಯಪಾನ ಧೂಮ್ರಪಾನ ಡ್ರಗ್ಸ್ ಎಲ್ಲ ಒಂದು Addiction, ಇದಲ್ಲದೆ ಈ ಜಂಕ್ ಪದಾರ್ಥಗಳನ್ನು ತಿನ್ನೋದು ಇನ್ನೂ ದೊಡ್ಡ Addiction ಎಲುಬಿಲ್ಲದ ನಾಲಿಗೆಗೆ ಆರೋಗ್ಯಕ್ಕೆ ಬೇಕಾದ ಪದಾರ್ಥಗಳು ಇಷ್ಟನೇ ಇಲ್ಲ. ನಾಲಿಗೆಗೆ ರುಚಿ ಖುಷಿ ಮದ ಕೊಡೊವಂತಹ ಆಹಾರನೇ ಬೇಕು.

ಆರೋಗ್ಯ ವೃದ್ಧಿಯಾಗೋಕ್ಕೆ ಒಳ್ಳೆಯ ರೀತಿಯ ಆಹಾರ ಪಥ್ಯಕ್ರಮ ಅವಶ್ಯಕ.

**ಜಂಕ್ ಫುಡ್ ಎಂದರೆ ಯಾವುದೆಲ್ಲ ?**

Pizza, Burger, Bread, Sandwich, Chocolate, Biscut, Icecreams, Packed Items, Canned Juices, Gullod Boiled siled Items ಇವೆಲ್ಲ ವೆಸ್ಟೆನ್ ಚೈನೀಸ್ ಆಹಾರಗಳು ಹಾನಿ ಉಂಟುಮಾಡುತ್ತದೆ.

ಐಷಾರಾಮಿ, ಲಕ್ಸೂರಿ ಪದಾರ್ಥಗಳು ಯಾರ ಮನಸ್ಸನ್ನಾದರೂ ಸೆಳೆದು ಬಿಡುತ್ತದೆ. ತಿಂದು ಬಾಯನ್ನು ಚಪ್ಪರಿಸಿ ಬಿಡುತ್ತೀವಿ.

ಈ ಜಂಕ್ ಪದಾರ್ಥಗಳಲ್ಲಿ ರುಚಿವರ್ಧಕ ಕೆಡದೆ ಇರುವ ಹಾಗೆ ನೋಡಿಕೊಳ್ಳುವ preservodives, artifiaal Colours, dyesಇದೆಲ್ಲ ಹಾಕುವುದರಿಂದ ನಮ್ಮ ಆರೋಗ್ಯಕ್ಕೆ ಬಹಳ ತೊಂದರೆ ಆಗುತ್ತಿದೆ. ಮೊದಲಿಗೆ ಈ ಜಂಕ್‌ಗಳನ್ನು ತಿಂದಾಗ ಏನೋ ಖುಷಿ, ಆನಂದ ನಾಲಿಗೆಗೆ ಒಂದು ಕಿಕ್, ಮತ್ತೆ ಮತ್ತೆ ತಿನ್ನೋಣ ಅನಿಸುತ್ತದೆ. ಅಭ್ಯಾಸ ಆಗಿ ಆಗಿ ಜಂಕ್ ಇಲ್ಲದಿದ್ದರೆ ಏನೋ ಕಳೆದುಕೊಂಡ ಹಾಗೆ ಆಗುತ್ತದೆ.

ಇದರಿಂದ ಆಗುವ ಪರಿಣಾಮ ಒಂದೆರಡಲ್ಲ ನಮಗೆ ಇದರ ಬಗ್ಗೆ ಗಮನನೇ ಇರುವುದಿಲ್ಲ. ಕಡು ಬಯಕೆಗಳು Uncontrollable clavengesರೂಢಿ Addiction ತಿನ್ನದೇ ಹೋದರೆ ಡಿಪ್ರೆಷನ್ ಏಕಾಗ್ರತೆ Concentration ಕಡಿಮೆ ಆಗೋವಂಥದ್ದು
ಮನಸ್ಥಿತಿಯಲ್ಲಿ ಏರುಪೇರು Memory Loss
ಹಾರ್ಮೋನುಗಳ ಅಸಮತೋಲನ, ಮುಟ್ಟಿನ ಸಮಸ್ಯೆ
ಲೈಂಗಿಕ ಸಮಸ್ಯೆ, ಬಂಜೆತನ Infertility
ತ್ವಚೆಗೆ ಸಂಬಂಧ ಪಟ್ಟಂತೆ – ಮೊಡವೆ, ತಲೆ ಕೂದಲು ಉದುರುವಂತಹದು, ತೂಕ ಹೆಚ್ಚಾಗುತ್ತಾ ಹೋಗುವಂಥದ್ದು obesty overweight ಎಲುಬು ಕೀಲು ತೊಂದರೆ. ಹಾರ್ಟ್ ಹೃದಯ ಸಂಬಂಧೀತ ಸಮಸ್ಯೆ. ಮಧುಮೇಹ, ಬೀಪಿ, ಥೈರಾಯಿಡ್ ಕಿಡ್ನಿ ಲಿವರ್ ಸೇರಿದಂತೆ ಹಲವಾರು ಆರೋಗ್ಯ ಸಮಸ್ಯೆ ಉಂಟಾಗುತ್ತದೆ. Packed Processed Ready to Eat Items ಸದಾಲಭ್ಯ ಇರುತ್ತದೆ. Tasty ತಯಾರಿ ಮಾಡೋದು ಸುಲಭ ಅಂಥ ನಾವು ಅದನ್ನೇ ತೊಗೊಂಡು ತಿನ್ನುತ್ತಾ ಇರುತ್ತೇವೆ. Time Saving

Generated by Foxit PDF Creator © Foxit Software
http://www.foxitsoftware.com For evaluation only.



Healthy ಆರೋಗ್ಯಕರ ಪದಾರ್ಥ ಅಂಥ Advertisementನಲ್ಲಿ ತೋರಿಸುವಂಥದನ್ನ ನಾವು ಕಣ್ಣು ಮುಚ್ಚಿಕೊಂಡು ತೊಗೊಂಡು ತಿಂದು ಬಿಡುತ್ತೇವೆ.

ದಯವಿಟ್ಟು ಈ ಪದಾರ್ಥಗಳನ್ನ ಸೇವಿಸಬೇಡಿ. ಇದರಲ್ಲಿ ವಿಷಭರಿತ ಅಂಶವೇ ಹೆಚ್ಚು. ನಿಮ್ಮನ್ನ ನೀವು ಇಷ್ಟಪಡಿ, ದೇಹಕ್ಕೆ ಕಷ್ಟ ಕೊಡಬೇಡಿ ಇದು ಬರೀ ತಾತ್ಕಾಲಿಕ ಆಸೆ ನೀಗಿಸುತ್ತದೆ. ಆದರೆ ಪೌಷ್ಠಿಕಾಂಶ ದೇಹಕ್ಕೆ ಸಿಗುವುದಿಲ್ಲ.

ಎಲ್ಲರು ಬುದ್ಧಿವಂತರು, ಒಳ್ಳೆಯ ಮನೆ ಕಾರು ಬಟ್ಟೆ ಬೇಕು ಅಂಥ ಒದ್ದಾಡುತ್ತೇವೆ. ಆದರೆ ದೇಹಕ್ಕೆ ಮಾತ್ರ ಕೆಟ್ಟ ಪದಾರ್ಥ ಕೊಡುತ್ತಿರುತ್ತೇವೆ.

* ಆರೋಗ್ಯವನ್ನು ವೃದ್ಧಿ ಮಾಡುವಂತಹ ಒಳ್ಳೆಯ ಊಟ ಮನೆಯಲ್ಲೇ ತಾಜಾ ತಯಾರಿಸಿದ ಊಟ ಮಾಡಿದರೆ ಒಳ್ಳೆಯದು,

* ಮಕ್ಕಳು ಊಟ ಮಾಡುವುದಿಲ್ಲ ಅಂತ Chocolate/ Biscut ಕೊಟ್ಟು ಸಮಾಧಾನ ಮಾಡಬೇಡಿ.

* ಒಂದು ದೃಢ ನಿರ್ಧಾರ ಮಾಡಿ ಈ Junk Items ನಿಲ್ಲಿಸಿಬಿಡಿ.

* ಒಂದು ದಿನ ತಿನ್ನುತ್ತೇನೆ ಪರವಾಗಿಲ್ಲ ಅಂಥ ನಿರ್ಲಕ್ಷ್ಯ ಮಾಡಬೇಡಿ, ನಿಧಾನವಾಗಿ Slow Poission ಆಗಿ ತೊಂದರೆ ಆಗುತ್ತೆ.

* Junk ತಿನ್ನೋದು ಆಸೆ ಆದಾಗ ಅದೊಂದು ವಿಷ ಅಂತ ನೆನಪು ಮಾಡಿಕೊಳ್ಳಿ.

* Weight Loss ಅಥವಾ Health Gain ಯಾವುದಕ್ಕೂ ಪೌಷ್ಠಿಕ ಆಹಾರ ಬೇಕೆ ಬೇಕು.

* ಹಣ್ಣು ತರಕಾರಿ ಸೊಪ್ಪು ಬೇಳೆ ರಸದಲ್ಲಿ ಅಡಿಗೆ ಮಾಡಿ ರುಚಿಯಾಗಿ ತಿನ್ನಿ. Junk Food ತಿನ್ನದೇ ದೇಹಕ್ಕೆ ಒಂದು ದೊಡ್ಡ ಉಪಕಾರ ಮಾಡಿ.

## ಸೂಕ್ತಿ ಸುಧಾ ಪಂಚಕಮ್

ಶ್ರೀ ಕೇಶವಮೂರ್ತಿ, ಕಲ್ಮನೆ

1) **"ಭವಿತವ್ಯಂ ಭವತ್ಯೇವ ಕರ್ಮಣಾಂ ಏಷನಿಶ್ಚಯಃ"**
ನಾನ್ ಹಾಗೆ ಮಾಡಿದೆ, ಹೀಗೆ ಮಾಡಿದೆಯೆಂದು ಹೇಳಿ ಕೊಳ್ಳುವವರೆ ಬಹುಮಂದಿ।
ಅದನಲ್ಲಗಳೆದು ತಾ ಹೇಳಿದಂತಾಗುವುದೆಂದು ಮತ್ತೆ ಕೆಲರು॥
ನಿಜ ಸಂಗತಿಯೆ ತಾ ಬೇರೆ, ಅವರಿವರ ಇಚ್ಛೆಗಳ ಹೊರತಾಗಿ
ದೇವರಿಚ್ಛೆಯಂದದಿ, ಆಗಬೇಕಾದುದೇ ಆಗುವುದು ದಿಟವು ॥

2) **"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ"**
ವಿಶಾಲಸಮಾಜದಲಾದರೋ ಉತ್ತಮೋತ್ತರು ಇಹರು ಬಹುಮಂದಿ॥
ಕೆಲರು ನುಡಿದರು ಹಿರಿಯರುತ್ತಮೋತ್ತಮರೆಂದು, ಮತ್ತೆ ಕೆಲರು ಉಪಕಾರ ಮಾಡಿದವರೆಂದು ॥
ವಿಶಾಲ ತಾತ್ವಿಕದೃಷ್ಟಿಯಿಂದವಲೋಕಿಸಿದರೆ ಜನುಮಕೊಟ್ಟ ತಾಯಿಯೇ ಮೊದಲು,
ನಂತರದಿ ಜನ್ಮಭೂಮಿಯೇ ಸ್ವರ್ಗಕಿಂತಲು ಮಿಗಿಲೆಂದು ತಿಳಿವುದು

3) **" ಪರಚ್ಛಿದ್ರೇಷು ಹೃದಯಮ್ "**
ದುಷ್ಟರನು ಸರಿದಾರಿಗೆ ತರುವುದಸದಳವು।
ಪರರ ಸುದ್ದಿಗೆ ಕಿವಿಯಾದವರನು, ಎಂದೆಂದು ಆಗದು ದಾರಿಗೆ ತರಲು
ಇನ್ನೊಬ್ಬರನು ನಿಂದಿಸಿ ಕುಹಕವಾಡುವುದೆ ಚಾಳಿಯಾದವರನು ಎಂದೆಂದು ಸರಿಪಡಿಸಲಾಗದು
ಅವರಿವರೆಲ್ಲರ ಬ್ರಹ್ಮಸೃಷ್ಟಿ ಅದಕದಕಾಗಿಯೆ ಆಗಿಹುದು ತಿಳಿಯ ॥

4) **" ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ"**
ನಿಜವಾಗಿ, ಆಳವಾಗಿ ಚಿಂತಿಸಿದೊಡೆ ಸಮಾಜದಿ ಹೆಜ್ಜೆಗಿಲ್ಲ ಸ್ವಾತಂತ್ರ್ಯವು।
ಬಾಲ್ಯದೊಳು ತಾಯ್ ತಂದೆ ಸಲಹಿದೊಡೆ, ಯೌವನದಿ ಪತಿಯು।
ವೃದ್ಧಾಪ್ಯದಲಿ ಸಲಹುವರು ತಾ ಸುತ ಸುತೆಯರು
ಎಲ್ಲಿಹದು? ಯಾವಾಗ ಆಕೆಗೆ ಸ್ವತಂತ್ರ ಚಿಂತನೆಯು॥

5) **"ಪೂರ್ಣನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ"**
ಮನೆ-ಮಠ ಆಸ್ತಿ ಪಾಸ್ತಿಗಳಿಗಾಗಿ ಎಲ್ಲೆಲ್ಲೂ ಇಹುದು ಜಗಳ।
ಚೂರು ಪಾರಿಗು ಅನುದಿನದಿ ಕಾದಾಡದೆ - ಬಡಿದಾಡದೆ ಇರುವವರು ವಿರಳ॥
ಮೇಧಾವಿಗಳ ಪರಿಯೆ ಬೇರಿಹುದು, ಪೂರ್ಣ ಕೈತಪ್ಪುವ ಮನಗಂಡಾಕ್ಷಣದಿ
ತ್ಯಾಗ ಮಾಡುವರು ಉದಾರತೆಯ ಪ್ರದರ್ಶಿಸಿ - ಅರ್ಧವ॥

Generated by Foxit PDF Creator © Foxit Software
http://www.foxitsoftware.com For evaluation only.



# ಶ್ರೀ ಶಾಂಕರ ತತ್ವದರ್ಶನ– ತೈತ್ತರಿಯೋಪನಿಷತ್ತು–8

ಶ್ರೀಮತಿ ಸ್ವಪ್ನಾ ಶಶಿಧರ ಭಟ್ಟ
ಸುರಭಿ, ಆಜಾದ್ ರಸ್ತೆ, ತೀರ್ಥಹಳ್ಳಿ
ಮೊ : 9480010501

ತೈತ್ತೀರೀಯು ಉಪನಿಷತ್ತಿನ ಸಾರದ ಕವಲುಗಳು ಎಷ್ಟೆಲ್ಲಾ ಕಡೆಗೆ ಚಾಚಿವೆಯೋ ಅದರ ಮೂಲ ಬೇರುಗಳೂ ಸಹ ಅಷ್ಟೇ ವಿಶಾಲವಾಗಿ ಹರಡಿವೆ. ಈ ಮೊದಲಿನ ಸಂಚಿಕೆಗಳಲ್ಲಿ ಸ್ಥೂಲವಾಗಿ ತೈತ್ತೀರಿಯೋಪನಿಷತ್ತು ಗೃಹಸ್ಥನ ಜೀವನ ಶೈಲಿಯಲ್ಲೂ ಸನ್ಯಾಸತ್ವವನ್ನು ತನ್ಮೂಲಕ ಮೋಕ್ಷವನ್ನು ಹೊಂದುವ ಮಾರ್ಗವೆಂದು ಹೇಳಿದ್ದೆ. ಆದರೆ ಮೋಕ್ಷವು ಮೋಹಪರವಾಗಿಯೂ ಇಲ್ಲವೆಂದು, ನಿರ್ಲಿಪ್ತತೆಯ ಅನುಭಾವದಿಂದಲೇ ಮೋಕ್ಷಪ್ರಾಪ್ತಿಯುಉ ಎಂಬುದು ಸರ್ವವಿಧಿತ. ಆದರೂ ತಾನು ತಾನೊಂದಾಗಿ ಎಂಬಂತೆ ಪ್ರಾಪಂಚಿಕತೆಯುನ್ನೇ ಸಂಪೂರ್ಣವಾಗಿ ನೆಚ್ಚಿಕೊಂಡಿರುವ, ಅದರೊಳಗೇ ಬದುಕುವ ಯಾವನಿಗೂ ನಿರ್ಲಿಪ್ತತೆ ಸುಲಭಸಾಧ್ಯವಾಗಲಾರದು. ಪದ್ಮಪತ್ರದ ಜಲಬಿಂದುವಿನಂತೆ, ಅಂಟಿಯೂ ಅಂಟದೆಯೇ ಬದುಕುವುದು ಸುಲಭದ ಮಾತೂ ಅಲ್ಲ. ಅದಕ್ಕೆಂದೇ ನಮ್ಮ ಭೌತಿಕ ಶರೀರ ಮತ್ತು ಮನಸ್ಸು, ಬುದ್ಧಿಗಳೆಡೆಗಿನ ಸಂಬಂಧದ ಸಾಮಿಪ್ಯತೆಯನ್ನು ಅರಿತುಕೊಳ್ಳಬೇಕು.

ನಮ್ಮ ಇಡೀ ಜೀವಿತದಲ್ಲಿ ಶರೀರ ಬಹಳಷ್ಟು ಕೆಲಸಗಳನ್ನು ಮಾಡುತ್ತದೆ. ಅವುಗಳಲ್ಲಿ ಬಹುತೇಕ ಮನಸ್ಸು ತೋರಿದಂತವೇ. ಕೆಲವೊಂದಷ್ಟನ್ನು ಬುದ್ಧಿ ವಿರೋಧಿಸಿದರೂ ಮನಸ್ಸಿನ ವಾಂಛೆಗಳ ಪ್ರಾಬಲ್ಯ ನಮ್ಮಿಂದ ಅನೇಕ ಕೆಲಸಗಳನ್ನು ಮಾಡಿಸುತ್ತದೆ. ಕೆಲವಷ್ಟು ಒಳ್ಳೆಯುವು, ಇನ್ನು ಕೆಲವಷ್ಟು ಒಳ್ಳೆಯುದಲ್ಲದವು. ಎಂದರೆ ನಮಗೋ, ಸಮಾಜಕ್ಕೋ ಅಹಿತವನ್ನುಂಟುಮಾಡುವಂಥವು. ಅದೇನೇ ಇದ್ದರೂ ಅಲ್ಲಿನಗೆ ನಮ್ಮ ಭೌತಿಕ ಶರೀರವು ನಡೆಸುವ ಕೈಂಕರ್ಯಗಳೆಲ್ಲವೂ ಚಿತ್ತ ಮತ್ತು ಬುದ್ಧಿಯ ಜೊತೆಗೆ ಸಂಬಂಧವಿರಿಸಿಕೊಂಡೇ, ಅವುಗಳ ಸ್ಥಿತಿಗೆ, ಆಣತಿಗೆ ಅನುಗುಣವಾಗಿಯೇ ನಡೆಯುತ್ತವೆ ಎನ್ನುವುದು ವಿಧಿತವಾಯಿತು.

ಎರಡನೇಯದು, ಈ ಹಿಂದೆ ನಾನು ಪ್ರಸ್ಥಾಪಿಸಿದ್ದ ಪಂಚ ಕೋಶಗಳ ವಿಚಾರ. ನಮ್ಮ ಸರೀರ ಮತ್ತು ಆಂತರ್ಯಗಳ ನಡುವಿನ ಎಲ್ಲ ಸಂವಹನಗಳಿಗೆ ಪರೋಕ್ಷ ಪ್ರಚೋದಕಗಳೇ ಇವೆಂದರೆ ಸರಿಯಾದೀತು. ಈ ಜಗತ್ತಿನಲಿರುವ ಎಲ್ಲ ಕ್ರಿಯಾಶೀಲತೆಯನ್ನೂ ಯಜ್ಞವೆಂದು ಭಾವಿಸೋಣ. ಆಗ ನಮ್ಮ ದೇಹದ ಚಯಾಪಚಯ ಕ್ರಿಯೆಗಳೂ ಯಜ್ಞವೆಂದೇ ಆಯಿತಲ್ಲವೇ? ಈ ಯಜ್ಞವು ಬಾಹ್ಯ ಕ್ರಿಯೆಗಳಾದ ಅನ್ನ ಉತ್ಪಾದನೆ, ಸಂಗ್ರಹ, ಸ್ವೀಕಾರಗಳಿಂದ ಹಿಡಿದು, ಸ್ನಾನಾದಿ ಶೌಚಕರ್ಮಗಳು, ಪಚನ, ಶ್ರವಣ, ದೃಕ್, ವಾಕ್ಕುವಿನಂತಹ ಅಂತಃ ಕ್ರಿಯೆಗಳನ್ನು ಸಹ ಒಳಗೊಂಡಿರುತ್ತದೆ. ಶರೀರದ ಅನ್ನಮಯು ಕೋಶದ ಪಂಚ ಜ್ಞಾನೇಂದ್ರಿಯಗಳು ಸಂಕಲ್ಪಗಳನ್ನು ಸಮನ್ವಯುಗೊಳಿಸಿದರೆ, ಯಜ್ಞಕ್ಕೆ ಅಗತ್ಯವಾದ ಶಕ್ತಿಯನ್ನು ಪ್ರಾಣಮಯ ಕೋಶವು ಪೂರೈಸುತ್ತದೆ. ಮನೋಮಯ ಕೋಶದಲ್ಲಿನ ಬುದ್ದಿಯು ಸಂಕಲ್ಪ ಶಕ್ತಿಯನ್ನು ಯಜ್ಞಕ್ಕೆ ಅಗತ್ಯವಾದ ದ್ರವ್ಯಗಳು, ಎಂದರೆ ಸಂಕಲ್ಪ ದ್ರವ್ಯಗಳಾಗಿ ಪರಿವರ್ತಿಸಿ ಕೆಲಸಗಳೆಂದಬ ಯಜ್ಞವನ್ನು ಮಾಡಿಸುತ್ತದೆ. ಅದನ್ನೇ ಹೇಳುವುದು, ಇಚ್ಛಾಶಕ್ತಿ ಎಂದೂ ಇದನ್ನೇ ಹೇಳುವುದು. ಯಾವುದೇ ಕಾರ್ಯವಾಗಲಿ, ದೃಢವಾದ ಇಚ್ಛಾಶಕ್ತಿಯಿದ್ದರೆ ಅಸಾಧ್ಯವೆಂದೆನಿಸುವುದೇ ಇಲ್ಲ. ಬೇರೇನೇ ದ್ರವ್ಯಗಳಿದ್ದರೂ ಘೃತದ ಆಹುತಿಮಾತ್ರದಿಂದ ಯಜ್ಞಜ್ವಾಲೆಗಳು ಹೇಗೆ ಪ್ರಚ್ಛನ್ನತೆಯನ್ನು ಗಳಿಸಿಕೊಂಡು ಜ್ವಲಿಸುವವೋ ಹಾಗೆಯೇ ನಮ್ಮ ಅಂತಃ ಶರೀರದ

Generated by Foxit PDF Creator © Foxit Software
http://www.foxitsoftware.com For evaluation only.



ಎಲ್ಲಾ ದ್ರವ್ಯಗಳಿಗೂ ಮಿಗಿಲಾದ ಸಂಕಲ್ಪ ದ್ರವ್ಯವು ಪ್ರಬಲವಾಗಿದ್ದರೆ ಅದೇ ನಮ್ಮಿಂದ ಎಂತಹ ಕ್ಲಿಷ್ಟ ಕರ್ಮ ಯಜ್ಞವನ್ನಾದರೂ ನೆರವೇರಿಸುವಂತೆ ಮಾಡುತ್ತದೆ.

ಎಂದಮೇಲೆ, ನಮ್ಮ ಎಲ್ಲ ಚಿಕ್ಕ-ಪುಟ್ಟ ಕಾರ್ಯಗಳಿಂದ ಮೊದಲುಗೊಂಡು ಸಂಸಾರ ನಿರ್ವಹಣೆ, ಸಂತಾನೋತ್ಪಾದನೆ, ಪರಪೀಡನೆ, ದ್ರವ್ಯಾದಿ ಅಪಹರಣಗಳೂ ಸಹ ನಮ್ಮ ಚಿತ್ತವೃತ್ತಿಯ ಸಂಬಂಧದಿಂದಲೇ ನಡೆಯುತ್ತವೆ. ನಮ್ಮ ಕೈಂಕರ್ಯಗಳು ಮೋಕ್ಷಮಾರ್ಗಕ್ಕೆ ಅನುಕೂಲಕರವಾಗಿರಬೇಕೆಂದರೆ ಅವು ನಮ್ಮ ಚಿತ್ತ ಮತ್ತು ಬುದ್ಧಿ ಎರಡರಿಂದಲೂ ನಿಯಂತ್ರಿಸಲ್ಪಟ್ಟಿರಬೇಕು. ನಿಯಂತ್ರಣವೆಂದರೂ ಸಹ ಬಲವಂತವಾಗಿ ವಾಂಛೆಗಳನ್ನು ಅದುಮಿ ಹಿಡಿಯುವುದಲ್ಲ, ಬದಲಾಗಿ ಭೌತಿಕ ಚಿತ್ತವೃತ್ತಿಗಳೆಡೆಗೆ ಸಹಜವಾದ ವಿಮುಖತೆಯನ್ನು ಬೆಳೆಸಿಕೊಳ್ಳುವುದು ನಿಯಂತ್ರಣ ಎನಿಸುತ್ತದೆ. ಅದೇ ದಿವ್ಯ ನಿರ್ಲಿಪ್ತಿ. ಇದಕ್ಕಾಗಿ ವಾರುಣೀ ವಿದ್ಯೆಯು ಅಗತ್ಯವಾಗುತ್ತದೆ. ಇ ಉಪಾಸನೆಗೆ ತೊಡಗಿದಾಗ ವ್ಯಕ್ತಿಯ ಜೀವನ ಪದ್ಧತಿಯೇ ಬದಲಾಗುತ್ತದೆ. ಎಲ್ಲರೊಡನೆ, ಎಲ್ಲರ ನಡುವೆ ಸಂಸಾರಸ್ಥರಾಗಿ ಬಾಳಿಕೊಂಡಿದ್ದೂ ಸಹ ಇಂತಹ ಆತ್ಮ ನಿರ್ಲಿಪ್ತತೆಯನ್ನು ಸಾಧಿಸುವುದು ಸಹ ಸುಲಭವೇನಲ್ಲ. ಈ ಸಾಧನೆಗೆ ಋತದ ಅರಿವು ಅತ್ಯಾವಶ್ಯಕ.

ಹಾಗಿದ್ದರೆ ನಾವು ಯಾವುದನ್ನು ಋತ ಎನ್ನೋಣ? ಹಿಂದಿನಿಂದ, ಪರಂಪರೆಗಳಿಂದ ನಡೆಸಿಕೊಂಡು ಬರಲಾಯಿತೆನ್ನುವ ಸಂಪ್ರದಾಯಗಳನ್ನೇ ಋತವೆನ್ನಲಾಗುವುದೆ? ಋತ ಎಂದರೆ ಯಾವುದು ನಿಜವೋ ಅದು. ಇಂದು ಋತವೆಂಬ ಒಂದು ಪದವನ್ನೇ ಅರಿಯುತ್ತಾ ಹೋಗೋಣ. ಕಳೆದ ಸಂಚಿಕೆಯಲ್ಲಿ ಜ್ಞಾನಿಯು ಪಾಪ-ಪುಣ್ಯಗಳೆರಡೂ ಜಗತ್ತಿಗೆ ಅನಿವಾರ್ಯವೆಂಬ ಋತ ಜ್ಞಾನದ ಅರಿವನ್ನು ಹೊಂದಿರುತ್ತಾನೆ ಎಂದು ಬರೆದಿದ್ದೆ. ಯಾವುದನ್ನು ನಾವು ಋತ ಜ್ಞಾನವೆಂದು ಕರೆಯಬಹುದು? ಪ್ರತ್ಯಕ್ಷವಾಗಿ ನಮ್ಮ ಕಣ್ಣು ಕಂಡಿದ್ದನ್ನು, ನಮ್ಮ ಕಿವಿಗಳು ಕೇಳಿದ್ದನ್ನು, ನಮ್ಮ ಇಂದ್ರಿಯಗಳು ಅನುಭವಿಸಿದ್ದನ್ನು ನಾವು ಋತ ಜ್ಞಾನವೆಂದು ಕರೆಯಲಾದೀತೆ? ಇದಕ್ಕೆ ಉತ್ತರ ಹೌದಾದರೂ ಇನ್ನೊಂದು ಅರ್ಥದಲ್ಲಿ ಅಲ್ಲ ! ಸುಮಾರಿಗೆ ಹತ್ತನೇ ತರಗತಿಯ ವರೆಗಿನ ಪಠ್ಯಕ್ರಮದಲ್ಲಿ ನಮ್ಮ ನೇತ್ರಗಳು ದೃಷ್ಟಿಸುವ ವಿಧಾನಗಳನ್ನು ಅಭ್ಯಸಿಸಿರುತ್ತೇವೆ. ನಮ್ಮ ಕಣ್ಣು ಹೊರಗಿನ ವಿಷಯವನ್ನು ಅದು ಇರುವುದಕ್ಕೆ ತದ್ವಿರುದ್ಧವಾಗಿ ಗುರುತಿಸಿ, ಎಂದರೆ ಗಾಢ ಬಣ್ಣಗಳನ್ನು ತಿಳಿಯ ಬಣ್ಣಗಳಾಗಿ, ನೇರವಾಗಿರುವುದನ್ನು ತಲೆಕೆಳಗಾಗಿ ಪ್ರತಿಬಿಂಬವನ್ನು ಮೂಡಿಸುತ್ತದೆ. ಮತ್ತು ಹೀಗೆ ಕಣ್ಣು ತಾನು ಕಂಡ ವಿಷಯದ ಸಂದೇಶವನ್ನು ಮೆದುಳಿಗೆ ಕಳುಹಿಸಿದಾಗ ಬುದ್ಧಿಯು ಅದನ್ನು ಸರಿಯಾಗಿ ಗ್ರಹಿಸುತ್ತದೆ. ಹೀಗೆ ನಾವು ಕಣ್ಣಿಂದ ಕಾಣುವುದೂ ಸಹ ಸತ್ಯವಲ್ಲ, ನಿಜರೂಪವಲ್ಲ !! ಇನ್ನು ಕಾಣದೇ, ಬರಿಯ ಕೇಳಿದ್ದು, ಕಾಣದೇ-ಕೇಳದೇ ಕೇವಲ ಅನುಭವಿಸಿದ್ದು ಎಷ್ಟರ ಮಟ್ಟಿಗೆ ಸತ್ಯವಾಗಿರಲು ಸಾಧ್ಯ? ಹಾಗಿದ್ದರೆ ನಾವು ಕಾಣುವುದು, ಕೇಳುವುದು, ಅನುಭವಿಸುವುದೆಲ್ಲವೂ ಕೇವಲ ಮಿಥ್ಯೆಯೇ? ಎಂದರೆ ಅದೂ ಅಲ್ಲ. ಹಾಗೆ ಯೋಚಿಸುತ್ತಾ ಹೋದರೆ ಪ್ರಪಂಚವೇ ಒಂದು ಬೃಹತ್ ಮಿಥ್ಯೆಯಂತೆ ಗೋಚರಿಸುತ್ತದೆ. ಎಂದಮೇಲೆ ಋತದ ಪರಿಕಲ್ಪನೆಯು ವಿಶಾಲವಾಗುತ್ತಾ ಸಾಗುತ್ತದೆ. ಋತ ಎಂದರೇ ವಾಸ್ತವ. ಆದರೆ ನಾನು ನೋಡಿದುದು ನಿಜವಲ್ಲ, ಕೇಳಿದುದು ವಾಸ್ತವವಲ್ಲ, ಸ್ಪರ್ಶದ ಅನುಭವಕ್ಕೆ ದಕ್ಕಿದುದು ವಾಸ್ತವವಲ್ಲವೆಂದಮೇಲೆ ಅದು

Generated by Foxit PDF Creator © Foxit Software
http://www.foxitsoftware.com For evaluation only.



## ಸುಭಾಷಿತ ಸಂಗ್ರಹ

ಶ್ರೀ ಎ. ವಿ. ಮೃತ್ಯುಂಜಯ ಸ್ವಾಮಿ
ಸಂಸ್ಕೃತ ಶಿಕ್ಷಕರು, ತೀರ್ಥಹಳ್ಳಿ

**ಅನಿರ್ಲೋಡಿತ ಕಾರ್ಯಸ್ಯ ವಾಗ್ಜಾಲಂ ವಾಗ್ಮಿನೋ ವೃಥಾ ।
ನಿಮಿತ್ತಾದಪರಾದ್ಧೇಶೋಃ ಧಾನುಷ್ಯಸ್ಯೇವ ವಲ್ಗಿತಮ್ ॥ 1 ॥**

ಕಾರ್ಯವನ್ನೇನೂ ಸಾಧಿಸದೇ ಬಹಳ ಮಾತನಾಡುವ ವಾಗ್ಮಿಯ ವಾಗ್ಜಾಲವು ವ್ಯರ್ಥವೇ ಸರಿ ಗುರಿಗೆ ಬಾಣವನ್ನು ಹೊಡೆದು ಬೀಳಿಸಲಾರದ ಬಿಲ್ಲುಗಾರನ ಜಂಭದ ಹಾರಾಟದಂತೆ ಅದು.

**ಅದೃಢಂ ಚ ಹತಂ ಜ್ಞಾನಂ ಪ್ರಮಾದೇನ ಹತಂ ಶ್ರುತಮ್ ।
ಸಂದಿಗ್ಧೋ ಹಿ ಹತೋ ಮಂತ್ರೋ ವ್ಯಗ್ರಚಿತ್ತೋ ಹತೋ ಜಪಃ ॥ 2 ॥**

ದೃಢವಲ್ಲದ ಜ್ಞಾನದಿಂದ ಪ್ರಯೋಜನವಿಲ್ಲ. ಮಾಡಿದ ತಪ್ಪಿನಿಂದಗಳಿಸಿದ ಕೀರ್ತಿಯು ಹಾಳಾಗುತ್ತದೆ. ಉಪದೇಶ ಪಡೆದ ಮಂತ್ರದಲ್ಲಿ ಅಪನಂಬಿಕೆ ಇದ್ದರೆ ಅದು ಸಿದ್ಧಿಸುವುದಿಲ್ಲ. ಕೋಪ ಕಳವಳದಿಂದ ಕೂಡಿದ ಮನಸ್ಸಿನಿಂದ ಮಾಡುವ ಜಪವು ಫಲಿಸುವುದಿಲ್ಲ.

**ಅವಿದಿತ ಪರಮಾನಂದೋ ವದತಿ ನಜೋ ವಿಷಯಮೇವ ರಮಣೀಯಮ್ ।
ತಿಲತೈಲಮೇವ ಮೃಷ್ಟಂ ಯೇನ ನದೃಷ್ಟಂ ಘೃತಂ ಕ್ವಾಪಿ ॥ 3 ॥**

ಬ್ರಹ್ಮಾನಂದವನ್ನು ತಿಳಿದು ಅನುಭವಿಸದ ಜನರು ವಿಷಯ ಸುಖವೇ ರಮಣೀಯ ಎನ್ನುತ್ತಾರೆ. ತುಪ್ಪವನ್ನು ಎಲ್ಲಿಯೂ ಕಾಣದವನಿಗೆ ಎಣ್ಣೆಯೇ ರುಚಿಕರವೆನಿಸುತ್ತದೆ.

**ನಿದ್ರಾಸ್ಥಾನಾನಿ ತು ತ್ರೀಣಿ ಪುರಾಣಂ ಪುಸ್ತಕಂ ಜಪಃ ।
ಅನಿದ್ರಾಯಾಃ ಪದಂ ತ್ರೀಣಿ ದ್ಯೂತಂ ಮದ್ಯಂ ಸ್ತ್ರಿಯಃ ತಥಾ ॥ 4 ॥**

ಸುಖ ನಿದ್ರೆಗೆ ಅವಕಾಶಗಳು ಮೂರು : ಪುರಾಣ, ಪುಸ್ತಕ, ಜಪ
ನಿದ್ರೆ ಬಾರದಿರಲು ಮೂರು ಕಾರಣಗಳು : ಜೂಜು, ಹೆಂಡ, ಸ್ತ್ರೀಯರು

**ಕಾಲಾಂತರೇ ಹ್ಯನರ್ಥಾಯ ಗೃಧ್ರೋ ಗೇಹೋಪರಿ ಸ್ಥಿತಃ ।
ಖಲೋ ಗೃಹ ಸಮೀಪಸ್ಥಃ ಸದ್ಯೋಽನರ್ಥಾಯ ದೇಹಿನಾಮ್ ॥ 5 ॥**

ಮನೆಯಮೇಲೆ ಹದ್ದು ಕುಳಿತರೆ ಮುಂದೆಂದೋ ಕಾಲಾಂತರಲ್ಲಿ ಕೆಡುಕು ಸಂಭವಿಸಬಹುದು. ಆದರೆ ದುಷ್ಟನು ಮನೆಯ ಹತ್ತಿರವಿದ್ದರೆ ಸಾಕು, ಕೂಡಲೇ ಕೆಡಕು ಸಂಭವಿಸುತ್ತದೆ.

**ಖಲಃ ಕುರ್ಯಾತ್ ಖಲಂ ಲೋಕಂ ಸಂತಮನ್ಯಂ ನ ಕಶ್ಚನ ।
ನ ಹಿ ಶಕ್ಯಂ ಪದಾರ್ಥಾನಾಂ ಭಾವನಂ ಚ ವಿನಾಶವತ್ ॥ 6 ॥**

ಕೆಟ್ಟ ಮನುಷ್ಯನು ಇನ್ನೊಬ್ಬನನ್ನು ಕೆಟ್ಟವನನ್ನಾಗಿ ಮಾಡಬಲ್ಲ. ಆದರೆ ಕೆಟ್ಟವನನ್ನು ಯಾರೂ ಒಳ್ಳೆಯವರನ್ನಾಗಿ ಮಾಡಲಾರರು. ವಸ್ತುಗಳನ್ನು ಸುಲಭವಾಗಿ ಹಾಳು ಮಾಡುಹುದೇ ಹೊರತು ಉತ್ಪಾದನೆ ಮಾಡಲು ಸಾಧ್ಯವಿಲ್ಲ.